ಸಂಪುಟ: 05 ಸಂಚಿಕೆ: 52 ಪುಟಗಳು: 08 ಮಂಗಳವಾರ 06 ಮೇ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು

ವೇಗವಾದ ಆದರೆ ಕೃತಕ ಸಂತೋಷದ ಹಿಂದೆ ಓಡುವುದಕ್ಕಿಂತ ಘನ ಸಾಧನೆಗಳನ್ನು ಮಾಡಲು ಹೆಚ್ಚು ಸಮರ್ಪಿತರಾಗಿರಿ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಕಬಾಬ್, ಗೋಬಿ ಮಂಚೂರಿ ಆಯ್ತು ಈಗ ಜಿಲೇಬಿ ಪರೀಕ್ಷೆ!

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ ಮಾರಾಟ ಮಾಡಲಾಗುತ್ತಿರುವ ಜಿಲೇಬಿ ಮತ್ತು ಶರಬತ್ತುಗಳಲ್ಲಿ ಕೃತಕ ಬಣ್ಣ ಬಳಸುತ್ತಿರುವುದರ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಮಾದರಿ ಪರೀಕ್ಷೆಗೆ ಮುಂದಾಗಿದೆ.

ರಾಜ್ಯದ ಹಲವು ಭಾಗಗಳಲ್ಲಿ ಜಿಲೇಬಿ ಮತ್ತು ಶರಬತ್ತುಗಳಲ್ಲಿ ಕೃತಕ ಬಣ್ಣ ಬಳಸಲಾಗುತ್ತದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಸುದ್ದಿಗಳು ಹರಿದಾಡಿದ ಹಿನ್ನೆಲೆಯಲ್ಲಿ ಪ್ರತಿ ಅಂಕಿತಾಧಿಕಾರಿಗಳ ವ್ಯಾಪ್ತಿಯಲ್ಲಿ ಐದು ಜಿಲೇಬಿ ಮಾದರಿ ಮತ್ತು ಐದು ಶರಬತ್ತು ಮಾದರಿಗಳನ್ನು ಸಂಗ್ರಹಿಸಿ ಮೂರು ದಿನಗಳೊಳಗೆ ವಿಶ್ಲೇಷಣೆ ಮಾಡಿ ವರದಿ ನೀಡುವಂತೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಆಯುಕ್ತರು ಸೂಚನೆ ನೀಡಿದ್ದಾರೆ.

ಆಯಾ ಜಿಲ್ಲಾಅಂಕಿತಾಧಿಕಾರಿಗಳು ಮಾದರಿಯನ್ನು ತಮ್ಮ ವಿಭಾಗದ ಸರಕಾರಿ ಆಹಾರ ಪ್ರಯೋಗಾಲಯಗಳಿಗೆ ಕಳುಹಿಸಲು ಸೂಚನೆ ನೀಡಲಾಗಿದೆ. ವರದಿ ಬಂದ ತಕ್ಷಣ ಕೇಂದ್ರ ಕಚೇರಿಗೆ ಕಳುಹಿಸಿಕೊಡುವಂತೆ ನಿರ್ದೇಶನ ನೀಡಲಾಗಿದೆ. ಆಹಾರ ಇಲಾಖೆ ಈಗಾಗಲೇ ಸಾಕಷ್ಟು ಆಹಾರ ಪದಾರ್ಥಗಳ ಮಾದರಿಯನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದು, ಗುಣಮಟ್ಟವಿಲ್ಲದ ಪದಾರ್ಥಗಳ ನಿಷೇಧ ಮಾಡಿದೆ. ಅಲ್ಲದೆ ಮಾರಾಟಗಾರರ ವಿರುದ್ಧ ಕ್ರಮ ತೆಗೆದು ಕೊಂಡಿದೆ. ಕರ್ನಾಟಕ ಆರೋಗ್ಯ ಇಲಾಖೆ ಗೋಬಿ ಮಂಚೂರಿ,

ಕಬಾಬ್‌ಗಳಲ್ಲಿ ಕೃತಕ ಬಣ್ಣಗಳನ್ನು ಬಳಸುವುದನ್ನು ನಿಷೇಧಿಸಿತ್ತು. ಚಿಕನ್, ಫಿಶ್, ಮಟನ್ ಮತ್ತು ವೆಜ್ ಕಬಾಬ್‌ಗಳಿಗೂ ಈ ನಿಯಮ ಅನ್ವಯ ಮಾಡಿತ್ತು. ಕಬಾಬ್‌ಗೆ ಹಾಕುವ ಕೆಂಪು ಮತ್ತು ಹಸಿರು ಬಣ್ಣದ ಫುಡ್ ಕಲರ್‌ಗಳನ್ನು ಈಗ ಬ್ಯಾನ್ ಮಾಡಲಾಗಿತ್ತು. ಕೃತಕ ಬಣ್ಣಗಳು ಆರೋಗ್ಯಕ್ಕೆ ಹಾನಿಕಾರಕ ಎಂದು ಆರೋಗ್ಯ ಇಲಾಖೆ ಹೇಳಿತ್ತು. ಇನ್ನು ನಿಯಮ ಉಲ್ಲಂಘಿಸಿದರೆ

ಇಲಾಖೆಯಿಂದ ಮಾದರಿ ಸಂಗ್ರಹ

7 ವರ್ಷ ಜೈಲು ಶಿಕ್ಷೆ ಮತ್ತು 10 ಲಕ್ಷ ರೂ. ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿತ್ತು.

ರಾಜ್ಯದಲ್ಲಿ ಮಾರಾಟವಾಗುವ ಕಬಾಬ್‌ಗಳಲ್ಲಿ ಕೃತಕ ಬಣ್ಣಗಳನ್ನು ಬಳಸಲಾಗುತ್ತಿದೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹೀಗಾಗಿ ಕಬಾಬ್ ತಯಾರಿಕೆಯಲ್ಲಿ ಕೃತಕ ಬಣ್ಣಗಳನ್ನು ಬಳಸುವುದನ್ನು ನಿಷೇಧಿಸಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿತ್ತು. ಕಬಾಬ್‌ಗಳ ಗುಣಮಟ್ಟದ ಬಗ್ಗೆ ಪರೀಕ್ಷೆ ನಡೆಸಲಾಗಿತ್ತು. ಕೃತಕ ಬಣ್ಣಗಳನ್ನು ಬಳಸುವುದರಿಂದ ಕಬಾಬ್ ಕಳಪೆಯಾಗಿದೆ.

ಇದರಿಂದ ಜನರ ಆರೋಗ್ಯಕ್ಕೆ ತೊಂದರೆಯಾಗುತ್ತದೆ ಎಂದು ವರದಿಯಾಗಿತ್ತು. ಹೀಗಾಗಿ ರಾಜ್ಯಾದ್ಯಂತ ಮಾರಾಟ ಮಾಡುವ ಕಬಾಬ್ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆ ಮಾಡಲಾಗಿತ್ತು. ರಾಜ್ಯದ ಪ್ರಯೋಗಾಲಯಗಳಲ್ಲಿ 39 ಕಬಾಬ್ ಮಾದರಿಗಳನ್ನು ಪರೀಕ್ಷಿಸಲಾಯಿತು. ಅದರಲ್ಲಿ 8 ಕಬಾಬ್ ಮಾದರಿಗಳು ಅಪಾಯಕಾರಿ ರಾಸಾಯನಿಕ ಬಣ್ಣಗಳನ್ನು ಹೊಂದಿದ್ದವು. ಅವು ಸುರಕ್ಷಿತವಲ್ಲ ಎಂದು ವರದಿಯಲ್ಲಿ ತಿಳಿದುಬಂದಿದೆ ಎಂದು ಆರೋಗ್ಯ ಇಲಾಖೆ ಹೇಳಿತ್ತು.

ಆಂಗ್ಲಭಾಷೆಯಲ್ಲಿ ಬರೆಯೋದನ್ನೇ ನಿಲ್ಲಿಸಿರೋ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರು ಕನ್ನಡ ಭಾಷೆಯನ್ನು ಬಿಟ್ಟು ಇಂಗ್ಲಿಷ್ ಭಾಷೆಯಲ್ಲಿ ಬರೆಯೋದೇ ಇಲ್ವಂತೆ. ಹೌದು, ಅದಕ್ಕೆ ಒಂದು ಕಾರಣವೂ ಇದೆ. ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ನಡೆದ ಸಾಹಿತಿ ಕಮಲಾ ಹಂಪನಾ ಸಾಹಿತ್ಯ ವೇದಿಕೆ ಮತ್ತು ಕರ್ನಾಟಕ ಚಿತ್ರಕಲಾ ಪರಿಷತ್ ಸಹಯೋಗದಲ್ಲಿ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಂಪನಾ ಅವರ ಚಾರು ವಸಂತ ದೇಸೀಕಾವ್ಯದ ಪರ್ಷಿಯನ್ ಭಾಷಾ ಕೃತಿಯನ್ನು ಜನಾರ್ಪಣೆಗೊಳಿಸಿ ಮಾತನಾಡಿದರು. ನಾನು ಸಾಹಿತಿ ಅಲ್ಲ. ಆದರೆ ಸಾಹಿತ್ಯ ಕ್ಷೇತ್ರದ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿರುವ ವ್ಯಕ್ತಿ. ನನ್ನನ್ನು ರಾಮಕೃಷ್ಣ ಹೆಗ್ಡೆ ಅವರು ಕನ್ನಡ ಕಾವಲು ಸಮಿತಿ ಅಧ್ಯಕ್ಷರನ್ನಾಗಿ ಮಾಡಿದರು. ಆದರೆ ನಾನು ಸಾಹಿತಿ ಅಲ್ಲದಿದ್ದರೂ ಅಧ್ಯಕ್ಷನಾದೆ. ಸಾಹಿತಿಯ ಬಗ್ಗೆ ಅಭಿರುಚಿ ಇದ್ದ ಕಾರಣಕ್ಕಾಗಿ ಹೆಗ್ಡೆ ಅವರು ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿದರು ಎಂದು ಹಿಂದಿನ ಘಟನೆಯನ್ನು ನೆನಪಿಸಿಕೊಂಡರು.

ಯು.ಟಿ ಖಾದರ್ ಮಂಪರು ಪರೀಕ್ಷೆಗೆ ಆಗ್ರಹಿಸಿದ ಸಚಿವೆ!

• ಉದಯವಾಹಿನಿ, ಬೆಂಗಳೂರು

ಸುಹಾಸ್ ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ಸ್ಪೀಕರ್ ಯು.ಟಿ ಖಾದರ್ ಅವರ ಮಂಪರು ಪರೀಕ್ಷೆ ಮಾಡಬೇಕು. ಆಗಷ್ಟೇ ದಕ್ಷಿಣ ಕನ್ನಡ ಜಿಲ್ಲೆಗಳ ಗಲಾಟೆಗಳ ಮಾಹಿತಿ ಹೊರಬರಲಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದ್ದಾರೆ. ಬೆಂಗಳೂರಿನಲ್ಲಿ ಸೋಮವಾರ ಪತ್ರಿಕಾಗೋಷ್ಠಿಯನ್ನು ನಡೆಸಿದ ಅವರು, ಪಿಎಫ್‌ಐ ಬ್ಯಾನ್ ಆದರೂ ಅದರ ಕಾರ್ಯಕರ್ತರು ಸಕ್ರಿಯವಾಗಿದ್ದಾರೆ. ಪಿಎಫ್‌ಐ ಸಂಘಟನೆಯಲ್ಲಿರುವವರು ಎಸ್‌ಡಿಪಿಐನಲ್ಲಿ ಸೇರಿಕೊಂಡಿದ್ದಾರೆ. ಸಿದ್ದರಾಮಯ್ಯ ಅವರು ಪಿಎಫ್‌ಐ ವಿರುದ್ಧದ ಕೇಸ್ ವಾಪಸ್ ಪಡೆದುಕೊಂಡ ಪರಿಣಾಮ ಅವರು ಮತ್ತೆ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಸುಹಾಸ್ ಕೊಲೆ ಪ್ರಕರಣದಲ್ಲಿ ಫಾಝಿಲ್ ಕುಟುಂಬದ ಪಾತ್ರ ಇಲ್ಲ ಅಂದಿದ್ದರು. ಸ್ಪೀಕರ್ ಆಗಿ ಅವರು ಈ ವಿಚಾರವಾಗಿ ಹೇಗೆ ಮಾತನಾಡುತ್ತಾರೆ ಅಂದೇ ಈ ವಿಚಾರವನ್ನು ಮಾತನಾಡಲು ಕಾರಣವೇನು ಯು.ಟಿ ಖಾದರ್ ಮೂಗಿನ ನೇರದ ಅಡಿಯಲ್ಲಿ ಘಟನೆಗಳು ನಡೆಯುತ್ತಿವೆ. ಸುಹಾಸ್ ಕೊಲೆಯಲ್ಲಿ ಫಾಝಿಲ್ ಕುಟುಂಬದ ಕೈವಾಡ ಇಲ್ಲ ಅಂದಿದ್ದರು. ಆದರೆ ಇದೀಗ ಅವರ ಸಹೋದರ ಹಣ ಕೊಟ್ಟಿದ್ದಾರೆ ಎಂದು ಸಾಬೀತಾಗಿದೆ. ಖಾದರ್ ಹಾಗೂ ಪೊಲೀಸ್ ಪೇದೆ ರಶೀದ್ ಬೇರೆ ಅಲ್ಲ. ಇಬ್ಬರಿಗೂ ಮಂಪರು ಪರೀಕ್ಷೆ ಆಗಬೇಕು. ಹಾಗಾದ್ರೆ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕೇಸ್ ಗಳ ಸತ್ಯತೆ ಬಟಾಬಯಾಗುತ್ತದೆ ಎಂದು ಶೋಭಾ ಕರಂದ್ಲಾಜೆ ಆಗ್ರಹಿಸಿದರು.

ಸೂಚನೆ ಕೊಟ್ಟ 1 ವರ್ಷವಾದರೂ ಕೆಲಸ ಮಾಡದ ಅಧಿಕಾರಿಗಳು

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ''176 ತರಬೇತುದಾರರ ನೇಮಕಾತಿಗೆ ನಾನೇ ಸೂಚಿಸಿ ಒಂದು ವರ್ಷವಾದರೂ ಇನ್ನೂ ನೇಮಕಾತಿ ಏಕೆ ಆಗಿಲ್ಲ'' ಎಂದು ಪ್ರಶ್ನಿಸಿದರು. ''ಎಲ್ಲಾ ಜಿಲ್ಲೆಗಳಲ್ಲೂ ಉಪ ನಿರ್ದೇಶಕರು ಇರಲೇಬೇಕು. ಕ್ರೀಡಾಪಟುಗಳಿಗೆ ಅಗತ್ಯವಾದಷ್ಟು ಪೌಷ್ಟಿಕಾಂಶ ಮತ್ತು ಪ್ರೋಟೀನ್ ಯುಕ್ತ ಆಹಾರ ಕೊಡಬೇಕು. ಪದೇ ಪದೇ ಪರಿಶೀಲನೆ ನಡೆಸಿ, ಲೋಪ ಕಂಡರೆ ವಾರ್ಡನ್‌ಗಳ ವಿರುದ್ಧ ಕ್ರಮ ಕೈಗೊಂಡು ವರದಿ ನೀಡಿ'' ಎಂದು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ''ನಿಗಧಿತವಾಗಿ ಪ್ರಾಧಿಕಾರದ ಸಭೆಗಳನ್ನು ನಡೆಸಬೇಕು. ಭಾರತೀಯ ಕ್ರೀಡಾ ಪ್ರಾಧಿಕಾರದ ಕಾರ್ಯ ಚಟುವಟಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ, ಅದಕ್ಕಿಂತ ಉತ್ತಮ ರೀತಿಯಲ್ಲಿ ನಮ್ಮ ಮಿತಿಯೊಳಗೆ ಕ್ರೀಡಾ ಕಾರ್ಯ ಚಟುವಟಿಕೆಗಳನ್ನು ನಡೆಸುವ ಬಗ್ಗೆ ಕ್ರಮವಹಿಸಿ ಎಂದು ತಾಕೀತು ಮಾಡಿದರು.

ರಕ್ಕಸರ ವಿರುದ್ಧ ಭಾರತ ಸಮರ

• ಯುದ್ಧ ಕಾರ್ಮೋಡ • ಭಾರತದ ಮೇಲೆ ಪಾಕ್ ಯುದ್ಧ ಸಾರಿದರೆ ನಡೆಯೋದು ಕೇವಲ 4 ದಿನ ಮಾತ್ರ... • ಮೇ.7ರಂದು ದೇಶಾದ್ಯಂತ ಮಾಕ್ ಡ್ರಿಲ್‌ಗೆ ಗೃಹ ಸಚಿವಾಲಯ ಸೂಚನೆ • ಪಾಕ್‌ನಿಂದ ಫತಾಹ್ ಕ್ಷಿಪಣಿ ಪರೀಕ್ಷೆ • ದುಷ್ಕರ್ಮಿಗಳಿಗೆ ಶಿಕ್ಷೆ

ಪಂಜಾಬ್ ಗಡಿಯಲ್ಲಿ ಸೇನೆಯಿಂದ ಮಾಕ್ ಡ್ರಿಲ್

ಪಹಲ್ಗಾಮ್ ದಾಳಿಯ ಬಳಿಕ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಹೆಚ್ಚುತ್ತಿರುವ ಕಾದಾಟದ ನಡುವೆಯು ಇದೀಗ ಭಾರತೀಯ ಸೇನೆ ಪಂಜಾಬ್‌ನ ಫಿರೋಜ್‌ಪುರ ಗಡಿ ಭಾಗದಲ್ಲಿ ಮಾಕ್ ಡ್ರಿಲ್ ನಡೆಸಿದೆ.ಏ.22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ನಡೆದ ಹಿಂದೂಗಳ ನರಮೇಧದ ಬಳಿಕ ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆ ಜೋರಾಗಿದೆ. ಭಾರತ ಪಾಕಿಸ್ತಾನಕ್ಕೆ ಒಂದಾದ ಮೇಲೊಂದರಂತೆ ಶಾಕ್ ಕೊಡುತ್ತಲೇ ಇದೆ. ಇದೆಲ್ಲದರ ನಡುವೆ ಭಾರತೀಯ ಸೇನೆ ಪಂಜಾಬ್‌ನ ಫಿರೋಜ್‌ಪುರ ಗಡಿ ಭಾಗದಲ್ಲಿ ಭಾನುವಾರ ರಾತ್ರಿ 9 ರಿಂದ 9:30ರ ಸಮಯದಲ್ಲಿ ಮಾಕ್ ಡ್ರಿಲ್ ನಡೆಸಿತು. ಮಾಕ್ ಡ್ರಿಲ್ ನಡೆಸುವ ಉದ್ದೇಶದಿಂದ ಪಂಜಾಬ್ ರಾಜ್ಯ ವಿದ್ಯುತ್ ನಿಗಮ ಲಿಮಿಟೆಡ್ 30 ನಿಮಿಷಗಳ ಕಾಲ ವಿದ್ಯುತ್ ಕಡಿತಗೊಳಿಸಿತ್ತು. ಗಡಿಭಾಗದಲ್ಲಿರುವ ಜನರು ಯಾವುದೇ ಕಾರಣಕ್ಕೂ ಈ ಸಂದರ್ಭದಲ್ಲಿ ಲೈಟ್ ಉರಿಸದಂತೆ ಮನವಿ ಮಾಡಲಾಗಿತ್ತು. ಜೊತೆಗೆ ಲೌಡ್ ಸ್ಪೀಕರ್ ಮೂಲಕ ಗ್ರಾಮಗಳಿಗೆ ತೆರಳುವಂತೆ ಘೋಷಣೆ ಮಾಡಲಾಯಿತು. ಮಾಕ್ ಡ್ರಿಲ್ ನಡೆದ 30 ನಿಮಿಷಗಳ ಕಾಲ ನಿರಂತರವಾಗಿ ಹೂಟರ್‌ಗಳು ಸದ್ದು ಮಾಡುತ್ತಿದ್ದವು. ಹಿರಿಯ ಅಧಿಕಾರಿಗಳ ಆದೇಶದಂತೆ, ದೀಪಗಳನ್ನು ಸಂಪೂರ್ಣವಾಗಿ ಆರಿಸಲಾಗಿತ್ತು. ಯಾವುದೇ ವಾಹನ ಲೈಟ್‌ಗಳನ್ನು ಆನ್ ಮಾಡದಂತೆ ಸೂಚಿಸಲಾಗಿತ್ತು. ಇನ್ನೂ ಭದ್ರತಾ ದೃಷ್ಟಿಯಿಂದ ಪಂಜಾಬ್ ಪೊಲೀಸರು ಪ್ರಮುಖ ಸ್ಥಳಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿದ್ದಾರೆ.

ಗಡಿಯಲ್ಲಿ ಪಾಕ್ ಸೇನೆಯ ಅಪ್ರಚೋದಿತ ದಾಳಿ

• ಉದಯವಾಹಿನಿ, ನವದೆಹಲಿ

ಕಳೆದ ತಿಂಗಳು ಪಹಲ್ಗಾಮ್ ಭಯೋತ್ಪಾದಕ ದಾಳಿಯಿಂದ ಭಾರತ ಮತ್ತು ಪಾಕಿಸ್ತಾನದ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ, ಗೃಹ ಸಚಿವಾಲಯ ಮೇ 7 ಬುಧವಾರ ರಂದು ಪರಿಣಾಮಕಾರಿ ನಾಗರಿಕ ರಕ್ಷಣೆಗಾಗಿ ಅಣಕು ಕವಾಯತುಗಳನ್ನು ನಡೆಸುವಂತೆ ಹಲವಾರು ರಾಜ್ಯಗಳನ್ನು ಕೇಳಿದೆ ಸೋಮವಾರ ವರದಿಯಾಗಿದೆ. ರಾಷ್ಟ್ರವ್ಯಾಪಿ ಈ ವ್ಯಾಯಾಮವು ನಾಗರಿಕ ಸನ್ನದ್ಧತೆಯನ್ನು ಹೆಚ್ಚಿಸುವುದು ಮತ್ತು ವಿವಿಧ ವಲಯಗಳಲ್ಲಿ ತುರ್ತು ಪ್ರತಿಕ್ರಿಯೆ ವ್ಯವಸ್ಥೆಗಳನ್ನು ಪರೀಕ್ಷಿಸುವುದರ ಮೇಲೆ ಕೇಂದ್ರೀಕರಿಸುತ್ತದೆ.

ಮಾಕ್ ಡ್ರಿಲ್‌ನ ಪ್ರಮುಖ ಅಂಶಗಳು:

1. ವಾಯುದಾಳಿ ಎಚ್ಚರಿಕೆ ಸೈರನ್‌ಗಳ ಕಾರ್ಯಾಚರಣೆ ಯುದ್ಧಕಾಲದ ಸನ್ನಿವೇಶಗಳನ್ನು ಅನುಕರಿಸಲು ಮತ್ತು ಅವುಗಳ ವ್ಯಾಪ್ತಿ ಮತ್ತು ಕಾರ್ಯವನ್ನು ನಿರ್ಣಯಿಸಲು ಸೈರನ್‌ಗಳನ್ನು ಪರೀಕ್ಷಿಸಲಾಗುತ್ತದೆ.
2. ನಾಗರಿಕ ರಕ್ಷಣಾ ತರಬೇತಿ ವಿದ್ಯಾರ್ಥಿಗಳು ಮತ್ತು ಸಮುದಾಯ ಸ್ವಯಂಸೇವಕರು ಸೇರಿದಂತೆ ನಾಗರಿಕರು ವಾಯುದಾಳಿಗಳು ಅಥವಾ ಕ್ಷಿಪಣಿ ದಾಳಿಯಂತಹ ತುರ್ತು ಸಂದರ್ಭಗಳಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮೂಲಭೂತ ತರಬೇತಿಯನ್ನು ಪಡೆಯುತ್ತಾರೆ.
3. ಕ್ರಾಸ್ ಬ್ಯಾಕೌಟ್ ಕ್ರಮಗಳು ಶತ್ರುಗಳ ಗುರಿಯನ್ನು ತಡೆಗಟ್ಟಲು ಬೆಳಕಿನ ಮೂಲಗಳನ್ನು ಕಡಿತಗೊಳಿಸಿದಾಗ ಪರಿಸ್ಥಿತಿಗಳನ್ನು ಅನುಕರಿಸಲು ಅಧಿಕಾರಿಗಳು ತಾತ್ಕಾಲಿಕ ಬ್ಯಾಕೌಟ್‌ಗಳನ್ನು ಜಾರಿಗೊಳಿಸುತ್ತಾರೆ.
4. ಪ್ರಮುಖ ಸ್ಥಾಪನೆಗಳ ಆರಂಭಿಕ ಮರೆಮಾಚು ವಿಕೆ ಪತ್ತೆ ಮತ್ತು ಗುರಿಯನ್ನು ತಪ್ಪಿಸಲು ಕಾರ್ಯತಂತ್ರದ ಸ್ಥಾವರಗಳು ಮತ್ತು ಮೂಲಸೌಕರ್ಯಗಳನ್ನು ದೃಷ್ಟಿ ಗೋಚರವಾಗಿ ಮರೆಮಾಡಲಾಗುತ್ತದೆ.
5. ಸ್ಥಳಾಂತರಿಸುವ ಯೋಜನೆ ನವೀಕರಣಗಳು ಮತ್ತು ಪೂರ್ವಾಭ್ಯಾಸಗಳು ನಿಜವಾದ ಬೆದರಿಕೆಗಳ ಸಂದರ್ಭದಲ್ಲಿ ತ್ವರಿತ ಚಲನೆಯನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳು ಅಸ್ತಿತ್ವದಲ್ಲಿರುವ ಸ್ಥಳಾಂತರಿಸುವ ಪ್ರೋಟೋಕಾಲ್‌ಗಳನ್ನು ಪರಿಷ್ಕರಿಸುತ್ತಾರೆ ಮತ್ತು ಪೂರ್ಣ ಪ್ರಮಾಣದ ಪೂರ್ವಾಭ್ಯಾಸಗಳನ್ನು ನಡೆಸುತ್ತಾರೆ.

ಪಹಲ್ಗಾಮ್ ದಾಳಿಯ ಬಳಿಕ ಭಾರತದ ಮೂರು ಸೇನೆಗೆ ಸಮರಭ್ಯಾಸವನ್ನು ಶುರು ಮಾಡಿದ್ದು ಈ ನಡುವೆ ಪಾಕಿಸ್ತಾನವು ಫತಾಹ್ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಿದೆ ಎಂದು ವರದಿಗಳು ತಿಳಿಸಿವೆ.

ಈ ಕ್ಷಿಪಣಿಯು 120 ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿದೆ. ಪಾಕಿಸ್ತಾನದ ಸೇನೆಯು ಈ ಕ್ಷಿಪಣಿಯನ್ನು ಗೌಪ್ಯ ಸ್ಥಳದಿಂದ ಉಡಾಯಿಸಿದೆ. ಫತಾಹ್ ಕ್ಷಿಪಣಿಯು ಆಧುನಿಕ ತಂತ್ರಜ್ಞಾನವನ್ನು ಒಳಗೊಂಡಿದ್ದು, ಇದು ಶತ್ರು ಗುರಿಗಳನ್ನು ನಿಖರವಾಗಿ ತಲುಪುವ ಸಾಮರ್ಥ್ಯವನ್ನು ಹೊಂದಿದೆ. ಈ ಪರೀಕ್ಷೆಯು ಪಾಕಿಸ್ತಾನದ ಸೇನಾ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶವನ್ನು ಹೊಂದಿದೆ ಎಂದು ತಿಳಿದುಬಂದಿದೆ. ಈ ಕ್ಷಿಪಣಿ ಪರೀಕ್ಷೆಯು ಭಾರತ ಮತ್ತು ಪಾಕಿಸ್ತಾನದ ನಡುವಿನ ರಾಜಕೀಯ ಮತ್ತು ಸೇನಾ ಉದ್ವಿಗ್ನತೆಯ ಹಿನ್ನೆಲೆಯಲ್ಲಿ ನಡೆದಿರುವುದು ಗಂಭೀರ ಚರ್ಚೆಗೆ ಕಾರಣವಾಗಿದೆ. ಎರಡೂ ದೇಶಗಳು ತಮ್ಮ ರಕ್ಷಣಾ ಸಾಮರ್ಥ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯತತ್ಪರವಾಗಿವೆ.

ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆ ಸೇರಿದಂತೆ 8 ವಲಯಗಳಲ್ಲಿ ಪಾಕಿಸ್ತಾನ ಸೇನಾ ಪಡೆಗಳು ಅಪ್ರಚೋದಿತ ಗುಂಡಿನ ದಾಳಿ ನಡೆಸುವ ಮೂಲಕ ಮತ್ತೊಮ್ಮೆ ಕದನ ವಿರಾಮ ಉಲ್ಲಂಘಿಸಿವೆ. ಸತತ 11 ದಿನಗಳಿಂದ ಪಾಕ್ ನಡೆಸುತ್ತಿರುವ ದಾಳಿಯನ್ನು ಭಾರತ ಸಮರ್ಥವಾಗಿ ಎದುರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಏಪ್ರಿಲ್ 22ರಂದು ಪಹಲ್ಗಾಮ್ ಉಗ್ರರ ದಾಳಿಯಲ್ಲಿ 26 ಮಂದಿ ಸಾವನ್ನಪ್ಪಿದ್ದು, ಈ ಘಟನೆ ಬಳಿಕ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಈ ನಡುವೆ ಕಳೆದ 11 ದಿನಗಳಿಂದ ರಾತ್ರಿಯ ವೇಳೆ ಗಡಿಯಲ್ಲಿ ಪಾಕಿಸ್ತಾನವು ಅಪ್ರಚೋದಿತ ದಾಳಿ ನಡೆಸುತ್ತಿದೆ. ಮೇ 4-5ರ ನಡುವಿನ ರಾತ್ರಿ ಪಾಕಿಸ್ತಾನದ ಸೇನೆ ಜಮ್ಮು-ಕಾಶ್ಮೀರದ ಕುಪ್ವಾರಾ, ಬಾರಾಮುಲ್ಲಾ, ಪೂಂಚ್, ರಾಜೌರಿ, ಮೆಂಧರ್, ನೌಶೇರಾ, ಸುಂದರ್‌ಬಾನಿ ಮತ್ತು ಅಖ್ನೂರ್ ಎದುರು ಪ್ರದೇಶಗಳಲ್ಲಿ ಎಲ್‌ಒಸಿಯಾದ್ಯಂತ ಅಪ್ರಚೋದಿತ ಸಣ್ಣ ಶಸ್ತ್ರಾಸ್ತ್ರಗಳಿಂದ ಗುಂಡಿನ ದಾಳಿ ನಡೆಸಿದೆ. ಭಾರತೀಯ ಸೇನೆ ಕೂಡ ಅದಕ್ಕೆ ಪ್ರತ್ಯುತ್ತರ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕ್‌ನಿಂದ ಶುರುವಾಯ್ತು ಸೈಬರ್ ದಾಳಿ

ಭಾರತ ಹಾಗೂ ಪಾಕಿಸ್ತಾನದ ನಡುವೆ

ಸುಹಾಸ್ ಶೆಟ್ಟಿ ಹತ್ಯೆ ಕೇಸ್: ಎನ್‌ಐಎ ತನಿಖೆಗೆ ವಿಶ್ವನಾಥ್ ಒತ್ತಾಯ

ಗೃಹ ಸಚಿವ ಅಮಿತ್ ಶಾ ಅವರಿಗೆ ತೇಜಸ್ವಿ ಸೂರ್ಯ, ಬ್ರಿಜೇಶ್ ಚೌಟ ಪತ್ರ, ತನಿಖೆಯನ್ನು ಎನ್‌ಐಗೆ ಹಸ್ತಾಂತರಿಸಬೇಕು

• ಉದಯವಾಹಿನಿ, ಬೆಂಗಳೂರು

ಸುಹಾಸ್ ಶೆಟ್ಟಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳವಣಿಗೆಗಳಾಗುತ್ತಿದ್ದು, ಕೊಲೆ ಪ್ರಕರಣದಲ್ಲಿ ಬಾಹ್ಯ ಅಂಶಗಳ ಕೈವಾಡವಿದೆ. ಹಾಗಾಗಿ ಈ ತನಿಖೆಯನ್ನು ಎನ್‌ಐಗೆ ವಹಿಸಬೇಕೆಂದು ಯಲಹಂಕದ ಬಿಜೆಪಿ ಶಾಸಕ ಎಸ್‌ಆರ್ ವಿಶ್ವನಾಥ್ ಒತ್ತಾಯಿಸಿದ್ದಾರೆ. ಸುಹಾಸ್ ಶೆಟ್ಟಿಯವರನ್ನು ಕೊಲೆ ಮಾಡಿದವರು ಸಾಮಾನ್ಯ ಜನರಂತೆ ಕಾಣುವ ಭಯೋತ್ಪಾದಕರು. ಇದು ಸ್ಥಳೀಯ ಸಮಸ್ಯೆಯಲ್ಲ. ಹೊರಗಿನ ಜನರು ಸಹ ಇದರಲ್ಲಿ ಭಾಗಿಯಾಗಿದ್ದಾರೆ. ತನಿಖೆಯನ್ನು ಎನ್‌ಐಗೆ ಹಸ್ತಾಂತರಿಸಬೇಕು, ಈ ಬಗ್ಗೆ ನಾವು ಗೃಹ ಸಚಿವರಿಗೆ ವಿನಂತಿಸಿದ್ದೇವೆ ಎಂದು ಎಸ್ ಆರ್ ವಿಶ್ವನಾಥ್ ಹೇಳಿದ್ದಾರೆ.

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ಭದ್ರತಾ ಸಂಸ್ಥೆಗೆ ವಹಿಸುವಂತೆ ಕೋರಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕೇಂದ್ರ ಕಾರ್ಮಿಕ ಖಾತೆ ಸಹಾಯಕ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಸಂಸದ ಬ್ರಿಜೇಶ್ ಚೌಟ ಹಾಗೂ ಸಂಸದ ತೇಜಸ್ವಿ ಸೂರ್ಯ ಪತ್ರ ಬರೆದಿದ್ದಾರೆ. ಬರ್ಬರ ಹತ್ಯೆಗೆ ಶೋಭಾ ಕರಂದ್ಲಾಜೆ ತೀವ್ರ ಕಳವಳ ವ್ಯಕ್ತಪಡಿಸಿ, ಇದೊಂದೇ ಪ್ರಕರಣವಲ್ಲ. ಹಿಂದೂ ಕಾರ್ಯಕರ್ತರು ನಿರಂತರವಾಗಿ ಪಟ್ಟಭದ್ರ ಹಿತಾಸಕ್ತಿಗಳ ದಾಳಿಗೆ ಗುರಿಯಾಗುತ್ತಿದ್ದಾರೆ.

ಇಂತಹ ದುಷ್ಕೃತ್ಯ ಎಸಗುವವರಿಗೆ ಸಮಾಜಘಾತುಕ ಶಕ್ತಿಗಳು ಕುಮ್ಮಕ್ಕು ನೀಡುತ್ತಿದ್ದು, ಕೋಮು ಸಂಘರ್ಷ ಸೃಷ್ಟಿಸಲು ಯತ್ನಿಸುತ್ತಿವೆ. ಆ ಮೂಲಕ ಹಿಂದೂ ಪರ, ಗೋಹತ್ಯೆ ಯಂತಹ ಕಾನೂನುಬಾಹಿರ ಕೃತ್ಯಗಳ ವಿರುದ್ಧ ಎತ್ತುವ ದನಿಗಳನ್ನು ಹತ್ತಿಕ್ಕುವ ಯತ್ನ ನಡೆದಿದೆ, ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಕರ್ನಾಟಕದಲ್ಲಿ ಕಾನೂನು- ಸುವ್ಯವಸ್ಥೆ ಹದಗೆಟ್ಟಿದ್ದು, ರಾಜ್ಯ ಸರಕಾರದ ನಿಷ್ಕ್ರಿಯತೆ ಹಾಗೂ ಓಲೈಕೆ ನೀತಿಯು ಸಮಾಜ ಘಾತುಕ ಶಕ್ತಿಗಳಿಗೆ ಹೆಚ್ಚು ಬಲ ನೀಡಿದಂತಾಗಿದೆ. ಹುಬ್ಬಳ್ಳಿ ಪೊಲೀಸ್ ಠಾಣೆ ಮೇಲಿನ ದಾಳಿಯಲ್ಲಿ ಭಾಗಿಯಾಗಿದ್ದವರ ವಿರುದ್ಧದ ಪ್ರಕರಣ ಹಿಂಪಡೆದಿರುವುದು, ಮೈಸೂರಿನ ಉದಯಗಿರಿ ಠಾಣೆ ಬಳಿ ದುಷ್ಕರ್ಮಿಗಳ ಗುಂಪು ನಡೆಸಿದ ದಾಂಧಲೆ ಇದಕ್ಕೆ ಉದಾ ಹರಣೆಗಳು, ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಸುಹಾಸ್ ಶೆಟ್ಟಿ ಕೊಲೆ ಪ್ರಕರಣದ ತನಿಖೆಯನ್ನು ಎನ್‌ಐಗೆ ವಹಿಸಬೇಕು ಎಂದು ಯಲಹಂಕದ ಬಿಜೆಪಿ ಶಾಸಕ ಎಸ್‌ಆರ್ ವಿಶ್ವನಾಥ್ ಒತ್ತಾಯಿಸಿದ್ದಾರೆ. ಈಗಾಗಲೇ ಎನ್‌ಐಗೆ ವಹಿಸುವಂತೆ ಕೋರಿ ಸಂಸದ ತೇಜಸ್ವಿ ಸೂರ್ಯ, ಬ್ರಿಜೇಶ್ ಚೌಟ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಅಮಿತ್ ಶಾಗೆ ಪತ್ರ ಬರೆದಿದ್ದಾರೆ.

ಶ್ರೀ ಅಭಯ ಲಕ್ಷ್ಮೀ ನರಸಿಂಹಸ್ವಾಮಿ ಸನ್ನಿಧಿಯಲ್ಲಿ ಮಕ್ಕಳ ನೃತ್ಯಾರ್ಪಣ

• ಉದಯವಾಹಿನಿ, ಬೆಂಗಳೂರು

ತ್ಯಾಗರಾಜನಗರದ 3ನೇ ಬ್ಲಾಕ್ ನಲ್ಲಿರುವ ಶ್ರೀ ಅಭಯ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನ ಶ್ರೀಪಜ್ರಕ್ಷೇತ್ರದಲ್ಲಿ ಮೇ 4ದಂದು ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಜಯಂತಿ ಸಪ್ತಾಹದ ಪ್ರಯುಕ್ತ ಬೆಳಗ್ಗೆ ನರಸಿಂಹಸ್ವಾಮಿಗೆ ಅಭಿಷೇಕ ಮತ್ತು ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು.



ಉದಯವಾಹಿನಿ ಚಿತ್ರ

ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಗರದ ಪ್ರಣವಾಂಜಲಿ ಪರ್ಫಾಮಿಂಗ್ ಆರ್ಟ್ಸ್‌ನ ವಿದ್ಯಾರ್ಥಿನಿಯರಾದ ಕು. ಕೃತಿ, ಕು. ಭಾವನಾ ಮತ್ತು ಕು. ತ್ರಿಶಾಲಿ ಇವರಿಂದ ಸಾಮೂಹಿಕ ನೃತ್ಯ ಪ್ರದರ್ಶನ ನಡೆಯಿತು. ನಂತರ ಎಂಟು ವರ್ಷದ ಪುಟ್ಟ ಪ್ರತಿಭೆ ಕು. ಆದ್ಯ ಮಯ್ಯ ಮಾಡಿದ ನರ್ತನ ಮುಖ್ಯ ಆಕರ್ಷಣೆಯಾಗಿತ್ತು. ಈ ಕಾರ್ಯಕ್ರಮದ ನೇತೃತ್ವವನ್ನು ಪ್ರಣವಾಂಜಲಿ ಟ್ರಸ್ಟ್‌ನ ವಿದುಷಿ ಶ್ರೀಮತಿ ಗಾಯತ್ರಿ ಮಯ್ಯ ಮತ್ತು ವಿದುಷಿ ಶ್ರೀಮತಿ ಪವಿತ್ರಾ ಪ್ರಶಾಂತ್ ವಹಿಸಿದ್ದರು. ದೇವಸ್ಥಾನದ ಸಹಾಯಕ ಅರ್ಚಕರಾದ ಶ್ರೀ ನರಹರಿ ಆಚಾರ್ಯ ಮಕ್ಕಳಿಗೆ ಪ್ರಶಸ್ತಿ ಪತ್ರ, ಪ್ರಸಾದ ನೀಡಿ ಆಶೀರ್ವಾದಿಸಿದರು.

ಅಪ್ಪು ಸವಿನೆನಪಿನಲಿ ಮೇ 24ರಂದು ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಅಧಿಕಾರಿ, ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಪ್ಪು ಸ್ಮಾರಕ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಮೇ 24ರಂದು ಆಯೋಜಿಸಲಾಗಿದೆ. ಇದರ ಕುರಿತು ಅಧ್ಯಕ್ಷರಾದ ಎ. ಅಮೃತ್ ರಾಜ್ ರವರು ಮಾಹಿತಿ ನೀಡಿದರು. ಎ.ಅಮೃತ್ ರಾಜ್ ರವರು ಮಾತನಾಡಿ ನಗುಮೊಗದ ಒಡೆಯ ಎಂಬ ಕೀರ್ತಿ ಇರುವ ಪವರ್ ಸ್ಟಾರ್ ಡಾ.ಪುನೀತ್ ರಾಜ್ ಕುಮಾರ್ ರವರು ನಮ್ಮ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು, ಅವರ ಸರಳತೆ, ಮಾನವೀಯತೆ, ಸಮಾಜ ಸೇವೆ, ಕ್ರೀಡಾ ಮನೋಭಾವನೆಯನ್ನು ನಮ್ಮ ಸಂಘವು ಆಳವಡಿಸಿಕೊಂಡು ಬಂದಿದೆ.

ಕ್ರೀಡೆ ಎಂದರೆ ಅಪ್ಪುವಿಗೆ ಅಚ್ಚುಮೆಚ್ಚು ಆದರಿಂದ ಅಪ್ಪು ಸ್ಮಾರಕ ಕ್ರಿಕೆಟ್ ಸ್ನೇಹಪೂರ್ವಕ ಪಂದ್ಯಾವಳಿ ಆಯೋಜಿಸಲಾಗಿದೆ. ನಾಲ್ಕು ತಂಡಗಳ ನಡುವೆ ಪಂದ್ಯಾವಳಿಗಳು ನಡೆಯಲಿದೆ 1)ಪೊಲೀಸ್ ತಂಡ 2)ಬೆಂಗಳೂರು ವಕೀಲರ ತಂಡ 3) ಬಿಬಿಎಂಪಿ ನೌಕರರ ತಂಡ 4) ಮಾಧ್ಯಮ ಬಳಗದ ತಂಡ ನಡುವೆ ಲೆದರ್ ಬಾಲ್ ಕ್ರಿಕೆಟ್ ಪಂದ್ಯ ಗಳು ಜರುಗಲಿದೆ. ಪ್ರಥಮ ಬಹುಮಾನ ಒಂದು ಲಕ್ಷ ರೂ ನಗದು, ಕಪ್, ಆಟಗಾರರಿಗೆ ಪ್ರತ್ಯೇಕ ಪಾರಿತೋಷಕ, ದ್ವಿತೀಯ ಬಹುಮಾನ ಐವತ್ತು ಸಾವಿರ, ಕಪ್ ಪ್ರಶಸ್ತಿಯನ್ನು ಇಡಲಾಗಿದೆ. ಮೇ 24ಪಂದ್ಯಾವಳಿಯನ್ನು ಗಣ್ಯ ಮಹನೀಯರಗಳಿಂದ ಉದ್ಘಾಟನೆಯಾಗಲಿದೆ. ಅಪ್ಪು ರವರ ಸಲ್ಲಿಸಿದ ಸೇವೆ ಚಿರಸ್ಥಾಯಿಯಾಗಿ ಉಳಿಯಬೇಕು, ಎಲ್ಲರು ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸಾಗಬೇಕು ಎಂಬ ಉದ್ದೇಶದಿಂದ ಈ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

625 ಅಂಕಗಳಿಸಿದ ಮಧುಸೂದನ್ ರಾಜು .ಎಸ್‌ಗೆ ಸಚಿವರಿಂದ ಸನ್ಮಾನ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಎಸ್‌ಎಸ್‌ಎಲ್‌ಸಿಯಲ್ಲಿ 625 ಅಂಕ ಪಡೆದ ಮಧುಸೂದನ್ ರಾಜು ಎಸ್.ವಿದ್ಯಾರ್ಥಿಯ ಮನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವರಾದ ದಿನೇಶ್ ಗುಂಡೂರಾವ್ ರವರು ಭೇಟಿ ನೀಡಿ, ವಿದ್ಯಾರ್ಥಿಯನ್ನು ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಸಚಿವರಾದ ದಿನೇಶ್ ಗುಂಡೂರಾವ್ ರವರು ಮಾತನಾಡಿ ಮಧುಸೂದನ್ ರಾಜು ಎಸ್.ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಪಡೆದು ಗಾಂಧಿನಗರ ವಿಧಾನಸಭಾ ಕ್ಷೇತ್ರಕ್ಕೆ ಕೀರ್ತಿ ತಂದಿದ್ದಾನೆ. ತಂದೆ, ತಾಯಿ ಮತ್ತು ಶಿಕ್ಷಕ ವೃಂದದವರಿಗೆ ಅಭಿನಂದನೆಗಳು ಅವರ ಸಹಕಾರದಿಂದ ಉತ್ತಮ ಅಂಕ ಪಡೆಲು ಮಧುಸೂದನ್ ರಾಜು ಎಸ್. ಪಡೆಯಲು ಸಾಧ್ಯವಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಮ್ಮ ಪ್ರೋತ್ಸಹ ಸಹಕಾರವಿರುತ್ತದೆ. ಆರ್.ಗುಂಡೂರಾವ್ ಫೌಂಡೇಷನ್ ವತಿಯಿಂದ ಮುಂದಿನ ಶಿಕ್ಷಣಕ್ಕೆ ಸಹಕಾರ ನೀಡಲಾಗುವುದು. ವಿದ್ಯೆ ಅಮೂಲ್ಯವಾದ ಜ್ಞಾನ, ವಿದ್ಯೆ ಕಲಿತರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ, ದೇಶ ಅಭಿವೃದ್ಧಿಯಾಗಲು ವಿದ್ಯಾವಂತರ ಅವಶ್ಯಕತೆ ಇದೆ ಎಂದು ಹೇಳಿದರು. ಗಾಂಧಿನಗರ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಉಮೇಶ್ ಬಾಬುರವರು, ಬ್ಲಾಕ್ ಕಾಂಗ್ರೇಸ್ ಸಮಿತಿ ಅಧ್ಯಕ್ಷರಾದ ಸರವಣನ್, ಮಾಜಿ ಪಾಲಿಕೆ ಸದಸ್ಯ ನವೀನ್ ಕುಮಾರ್ ರಾಥೋಡ್, ಯುವ ಕಾಂಗ್ರೇಸ್ ದರ್ಶನ್ ರವರು ಉಪಸ್ಥಿತರಿದ್ದರು

ನಾಪತ್ತೆಯಾಗಿದ್ದ ಬೆಂಗಳೂರಿನ 800 ರೌಡಿಗಳ ಪೈಕಿ 770 ಮಂದಿ ಪತ್ತೆ

• ಉದಯವಾಹಿನಿ, ಬೆಂಗಳೂರು

ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಪೊಲೀಸರ ಕಣ್ಣಪ್ಪಿಸಿ ಓಡಾಡಿಕೊಂಡಿದ್ದ 800 ರೌಡಿ ಶೀಟರ್‌ಗಳ ಪೈಕಿ 770 ಮಂದಿಯನ್ನು ಪತ್ತೆ ಮಾಡಲಾಗಿದೆ. ನಗರದಲ್ಲಿ ಪ್ರಸ್ತುತ 6 ಸಾವಿರ ಸಕ್ರಿಯ ರೌಡಿಗಳಿದ್ದು, ಈ ಪೈಕಿ 800 ಮಂದಿಯನ್ನು ಪೊಲೀಸರು ಕಣ್ಣಾವಲಿನಿಂದ ಹೊರಗಿರುವವರ ಪಟ್ಟಿಗೆ ಸೇರಿಸಿದ್ದರು. ಇವರು ಕಳ್ಳತನ ಅಥವಾ ದರೋಡೆಯಂತಹ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿ, ತಲೆಮರೆಸಿಕೊಂಡಿದ್ದಾರೆ. ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಾತನಾಡಿ, ಸಮಾಜ ಘಾತುಕ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ತಡೆಯುವ ಉದ್ದೇಶದಿಂದ ರೌಡಿಗಳ ಮೇಲೆ ನಿಗಾ ಇಡಲಾಗುತ್ತದೆ. ಠಾಣೆಯಲ್ಲಿ ರೌಡಿ ಪಟ್ಟಿ ತೆರೆಯಲು ಇದು ಒಂದು ಪ್ರಮುಖ ಕಾರಣ. ಯಾವುದೇ ರೌಡಿಯನ್ನು ನಾಪತ್ತೆ ಪಟ್ಟಿಗೆ ಸೇರಿಸಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು.

ಪರಿಶಿಷ್ಟ ಜಾತಿಗಳ ಸಮೀಕ್ಷೆಗೆ ಸಹಕರಿಸುವಂತೆ ಸಿಎಂ ಸಿದ್ದರಾಮಯ್ಯ ಮನವಿ

ದತ್ತಾಂಶ ಸಂಗ್ರಹಿಸಲು ಮನೆ ಮನೆ ಸಮೀಕ್ಷೆ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸುವ ಸಲುವಾಗಿ ಸಮರ್ಪಕ ದತ್ತಾಂಶ ಸಂಗ್ರಹಿಸಲು ಇಂದಿನಿಂದ ಮನೆ ಮನೆ ಸಮೀಕ್ಷೆ ನಡೆಯುತ್ತಿದ್ದು, ಸಮುದಾಯಗಳು ಮಾಹಿತಿ ನೀಡುವ ಮೂಲಕ ಸಹಕರಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಒಳ ಮೀಸಲಾತಿ ಜಾರಿಗೊಳಿಸಲು ಬದ್ಧತೆ ಪ್ರದರ್ಶಿಸಿರುವ ಮುಖ್ಯಮಂತ್ರಿಯವರಿಗೆ ಅಭಿನಂದನೆ ಸಲ್ಲಿಸಿದರು. ಹಲವು ದಶಕಗಳ ಬೇಡಿಕೆ ಈಗ ಈಡೇರುವ ಕಾಲ ಸನ್ನಿಹಿತವಾಗಿದೆ. ಈಗಾಗಲೇ ಆಂಧ್ರಪ್ರದೇಶ, ತೆಲಂಗಾಣದಲ್ಲಿ ಈ ರೀತಿಯ ಸಮೀಕ್ಷೆಗಳು ನಡೆದು ವಿಧಾನಸಭೆಯಲ್ಲಿ ಮಂಡನೆಯಾಗಿವೆ. ನಮಲ್ಲೂ ನಾಗಮೋಹನ್ ದಾಸ್ ವರದಿಯನ್ನು ವಿಧಾನಸೌಧದಲ್ಲಿ ಮಂಡಿಸಲಾಗುವುದು

– ಕೆ.ಹೆಚ್.ಮುನಿಯಪ್ಪ
ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ-2025 ಕುರಿತಂತೆ ವಿಧಾನಸೌಧದ ಸಮೇಳನ ಕೊಠಡಿಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೇಸ್ ಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದಂತೆ ಒಳಮೀಸಲಾತಿ ಜಾರಿಗೆ ನಮ ಸರ್ಕಾರ ಬದ್ಧವಾಗಿದೆ. ಈ ದಿಕ್ಕಿನಲ್ಲಿ ಇಂದಿನಿಂದ ಮಹತ್ವದ ಹೆಜ್ಜೆ ಇಟ್ಟಿದ್ದೇವೆ ಎಂದರು. ಸಂವಿಧಾನದ 341ನೇ ವಿಧಿಯ ಅಡಿಯಲ್ಲಿ ಪರಿಶಿಷ್ಟ ಜಾತಿಪಟ್ಟಿಯಲ್ಲಿ 101 ಜಾತಿಗಳನ್ನು ಗುರುತಿಸಲಾಗಿದೆ. ಈ ಜಾತಿಗಳ ನಡುವೆ ಮೀಸಲಾತಿಯನ್ನು ವೈಜ್ಞಾನಿಕವಾಗಿ ವರ್ಗೀಕರಣ ಮಾಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆ ಎಂದು ಸುಪ್ರೀಂಕೋರ್ಟ್ ಕಳೆದ ವರ್ಷ ಆಗಸ್ಟ್ 1ರಂದು ನೀಡಿರುವ ತೀರ್ಪಿನಲ್ಲಿ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗವನ್ನು ನಮ ಸರ್ಕಾರ ರಚನೆ ಮಾಡಿದೆ. ಆಯೋಗ ಈಗಾಗಲೇ ಮಧ್ಯಂತರ ವರದಿ ನೀಡಿ, ಸಮರ್ಪಕ ದತ್ತಾಂಶ ಸಂಗ್ರಹಿಸುವ ಅಗತ್ಯವಿದೆ ಎಂದು ಹೇಳಿದೆ. ಹಲವು ಸಮುದಾಯಗಳ ಸಂಘಟನೆಗಳು ಇದೇ ಅಭಿಪ್ರಾಯವನ್ನು ಹೇಳಿವೆ. ಈ ಮೊದಲು 2011ರ ಜನಗಣತಿ ಆಧಾರದಲ್ಲಿ ಸದಾಶಿವ ಆಯೋಗ ಪರಿಶಿಷ್ಟ ಜಾತಿ ಸಮುದಾಯಗಳ ಜನಸಂಖ್ಯೆಯನ್ನು ಗುರುತಿಸಿತ್ತು. ಅದರಲ್ಲಿ ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಸಮುದಾಯದಲ್ಲಿ ಯಾರು, ಎಷ್ಟು ಮಂದಿ ಇದ್ದಾರೆ ಎನ್ನುವುದು ಸ್ಪಷ್ಟವಾಗಿಲ್ಲ.

ಎಡಗೈ, ಬಲಗೈ ಸಮುದಾಯದವರು ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂಬ ವರ್ಗವನ್ನು ಸಾಮಾನ್ಯವಾಗಿ ಬಳಕೆ ಮಾಡುತ್ತಿದ್ದಾರೆ. ಗೊಂದಲಗಳನ್ನು ನಿವಾರಿಸಲು ಮೂಲ ಜಾತಿಯನ್ನು ಕರಾರುವಾಕ್ಕಾಗಿ ತಿಳಿಯಲು ಇಂದಿನಿಂದ ಮೇ 17ರವರೆಗೆ ಮನೆ ಮನೆಗೆ ಸಮೀಕ್ಷೆ ನಡೆಸಲಾಗುತ್ತಿದೆ. ಮೊದಲ ಹಂತದ ಸಮೀಕ್ಷೆಗೆ ಸುಮಾರು 65 ಸಾವಿರ ಶಿಕ್ಷಕರನ್ನು ನಿಯೋಜಿಸಲಾಗಿದೆ. 10-12 ಮಂದಿ ಶಿಕ್ಷಕರಿಗೆ ಒಬ್ಬ ಮೇಲ್ವಿಚಾರಕ ಇರುತ್ತಾರೆ ಎಂದರು. ಎರಡನೇ ಹಂತದಲ್ಲಿ ಮೇ 19ರಿಂದ 21ರ ನಡುವೆ ವಿಶೇಷ ಶಿಬಿರಗಳಲ್ಲಿ ಮಾಹಿತಿ ಕಲೆ ಹಾಕಲಾಗುವುದು. 3ನೇ ಹಂತದಲ್ಲಿ ಮೇ 19ರಿಂದ 22 ರವರೆಗೆ ಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಅವಕಾಶ ಕಲ್ಪಿಸಲಾಗಿದೆ. ಮೊದಲ ಹಂತದಲ್ಲಿ ಮಾಹಿತಿ ನೀಡಲು ಸಾಧ್ಯವಾಗದವರು ಎರಡು ಹಾಗೂ ಮೂರನೇ ಹಂತದಲ್ಲಿ ಮಾಹಿತಿ ನೀಡಬಹುದಾಗಿ ಎಂದರು. ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡಿ, ಇದೊಂದು ಐತಿಹಾಸಿಕ ಸಮೀಕ್ಷೆಯಾಗಿದೆ. ಸುಮಾರು 100 ಕೋಟಿ ರೂಪಾಯಿಗಳು ವೆಚ್ಚವಾಗಲಿದೆ. ಪರಿಶಿಷ್ಟ ಜಾತಿಗಳ ಎಲ್ಲಾ ಉಪಜಾತಿಗಳು ಒಟ್ಟಾಗಿ ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಕೃಷಿ ಮಾರುಕಟ್ಟೆ, ಸಕ್ಕರೆ ಸಚಿವ ಶಿವಾನಂದ ಪಾಟೀಲ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಶಾಸಕರಾದ ರೂಪಶಶಿಕಲಾ, ವಿಧಾನ ಪರಿಷತ್ ಸದಸ್ಯರಾದ ಸುಧಾಮದಾಸ್, ನಸೀರ್ ಅಹಮದ್ ಉಪಸ್ಥಿತರಿದ್ದರು.

ಮೊಬೈಲ್ ಆ್ಯಪ್ ಮೂಲಕವೂ ಸಮೀಕ್ಷೆಗೆ ಅವಕಾಶ ಮಾಡಿಕೊಡಲಾಗಿದೆ. ಬೆಳಗ್ಗೆ 6.30 ರಿಂದ ಸಂಜೆ 6.30ರವರೆಗೆ ಮೊಬೈಲ್ ಆ್ಯಪ್ ಎನೇಬಲ್ ಮಾಡಲಾಗಿರುತ್ತದೆ. ದಿನದ 24 ಗಂಟೆಗೂ ಸಕ್ರಿಯವಾಗಿರುವ ಹೆಲ್ಪ್ ಲೈನ್ ನಂಬರ್ 94813 59000 ಅನ್ನು ಇದಕ್ಕಾಗಿ ಸ್ಥಾಪಿಸಲಾಗಿದೆ

-ಸಿದ್ದರಾಮಯ್ಯ, ಮುಖ್ಯಮಂತ್ರಿ

ನಿಖರ ದತ್ತಾಂಶ ಸಂಗ್ರಹಿಸಿ

ಒಳ ಮೀಸಲಾತಿ ಕುರಿತು ವರದಿ ನೀಡಲು ಆಯೋಗಕ್ಕೆ 60 ದಿನಗಳ ಕಾಲಾವಕಾಶ ನೀಡಲಾಗಿದೆ. ವರದಿ ಸಲ್ಲಿಕೆಯಾದ ತಕ್ಷಣವೇ ಸರ್ಕಾರ ಒಳಮೀಸಲಾತಿ ಕುರಿತು ನಿರ್ಣಯ ಕೈಗೊಳ್ಳಲಿದೆ. ಕಾಂಗ್ರೇಸ್ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ನುಡಿದಂತೆ ನಡೆಯುತ್ತಿದೆ. ಒಳ ಮೀಸಲಾತಿಗೆ ಸಂಪುಟದ ಎಲ್ಲಾ ಸಚಿವರು ಒಪ್ಪಿದ್ದಾರೆ. ಯಾರ ನಡುವೆಯೂ ಭಿನ್ನ ಅಭಿಪ್ರಾಯಗಳಿಲ್ಲ ಎಂದರು. ಹಿಂದುಳಿದ ವರ್ಗಗಳ ಕಾಂತರಾಜು ಆಯೋಗದ ವರದಿಗೂ ಈ ಸಮೀಕ್ಷೆಗೂ ಸಂಬಂಧ ಇಲ್ಲ. ಒಳ ಮೀಸಲಾತಿಗಾಗಿ ಮಾತ್ರ ಗಣತಿ ನಡೆಸಲಾಗುತ್ತಿದೆ ಎಂದರು.

ಮಳೆ: ಏಪ್ರಿಲ್‌ನಲ್ಲಿ ಬೆಸ್ಕಾಂಗೆ 2.99 ಕೋಟಿ ರೂ. ನಷ್ಟ

• ಉದಯವಾಹಿನಿ, ಬೆಂಗಳೂರು

ಈ ಬಾರಿ ಪೂರ್ವ ಮುಂಗಾರು ತುಸು ಬಿರುಸಾಗಿದ್ದು, ಮಳೆ-ಗಾಳಿಯ ಅಬ್ಬರಕ್ಕೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಏಪ್ರಿಲ್ ಒಂದೇ ತಿಂಗಳಲ್ಲಿ 2.99 ಕೋಟಿ ನಷ್ಟವಾಗಿದೆ. ಈ ಬಾರಿ ಮಾರ್ಚ್ ತಿಂಗಳಿಂ

ರಕ್ತ ಕೊಟ್ಟೆವು, ಭೂಮಿ ಕೊಡುವ ಪ್ರಶ್ನೆಯೇ ಇಲ್ಲ

ಏ.25 ರಂದು ಕೆಐಎಡಿಬಿಗೆ ಜಮೀನು ನೀಡುವ, ನೀಡದಿರುವ ಬಗ್ಗೆ ಜಿಲ್ಲಾ, ತಾಲ್ಲೂಕು ಆಡಳಿತವು ರೈತರಿಂದ ಅಭಿಪ್ರಾಯ ಸಂಗ್ರಹ

• ಉದಯವಾಹಿನಿ, ಶಿಡ್ಲಘಟ್ಟ

ಕೆಐಎಡಿಬಿಯು ಫಲವತ್ತಾದ ಕೃಷಿ ಭೂಮಿಯ ಸ್ವಾಧೀನ ಪ್ರಕ್ರಿಯೆ ಕೈ ಬಿಡಲು ಏಪ್ರಿಲ್ 25 ರಂದು ನಡೆಸಿದ ರೈತರಿಂದ ಅಭಿಪ್ರಾಯ ಸಂಗ್ರಹವು ಪಾರದರ್ಶಕವಾಗಿ ನಡೆದಿಲ್ಲ. ಜೊತೆಗೆ ರೈತರ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರ ಲಘುವಾದ ಹೇಳಿಕೆ ವಿರುದ್ಧ ಹಸಿರು ಸೇನೆ ರೈತ ಸಂಘ, ಕೆಐಎಡಿಬಿ ಭೂ ವಿರೋಧಿ ಹೋರಾಟ ಸಮಿತಿ ಸದಸ್ಯರು ಹಾಗೂ ಬಿಜೆಪಿ ಕಾರ್ಯಕರ್ತರು ಶಿಡ್ಲಘಟ್ಟ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ವೇಳೆ ಹಸಿರು ಸೇನೆ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ ಮಾತನಾಡಿ, ನಾವು ಕೈಗಾರಿಕೆಗಳ ವಿರೋಧಿಗಳಲ್ಲ. ಆದರೆ, ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕೆಗಳಿಗೆ ಸ್ವಾಧೀನ ಪಡಿಸಿಕೊಳ್ಳುವುದನ್ನು ಬಲವಾಗಿ ವಿರೋಧಿಸುತ್ತೇವೆ ಎಂದರು.

ರೈತರು ಭೂಮಿಯನ್ನು ನೀಡಲು ಒಪ್ಪಿದರೆ ಮಾತ್ರವೇ ರಾಜ್ಯ ಸರ್ಕಾರ, ಕೆಐಎಡಿಬಿಯು ಕೈಗಾರಿಕೆಗಳ ಸ್ಥಾಪನೆಗೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಿ.

ಅದು ಬಿಟ್ಟು ರೈತರ ವಿರೋಧದ ನಡುವೆಯೂ ಹಠಕ್ಕೆ ಬಿದ್ದಂತೆ ರಾಜ್ಯ ಸರ್ಕಾರ, ಜಿಲ್ಲಾ ಆಡಳಿತ, ತಾಲ್ಲೂಕು ಆಡಳಿತವು ಫಲವತ್ತಾದ ಕೃಷಿ ಭೂಮಿಯನ್ನು ಏಕೆ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದೆಯೋ ಅರ್ಥವಾಗುತ್ತಿಲ್ಲ ಎಂದರು.

ರೈತರ ಪರ ಎಂದು ಹೇಳಿಕೊಳ್ಳುವ ಸರ್ಕಾರ, ಜನಪ್ರತಿನಿಧಿಗಳು ಬಂಡವಾಳಶಾಯಿಗಳ ಮರ್ಜಿಗೆ ಬಿದ್ದು ಫಲವತ್ತಾದ ಕೃಷಿ ಭೂಮಿಯನ್ನು ರೈತರ ಒಪ್ಪಿಗೆ ಇಲ್ಲದೆ ಬಲವಂತಕ್ಕೆ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದು ನಾವು ಅದಕ್ಕೆ ಅವಕಾಶ ಕೊಡುವುದಿಲ್ಲ. ರಕ್ತ ಕೊಡುತ್ತೇವೆ ಜೀವವನ್ನಾದರೂ ಕೊಡುತ್ತೇವೆ ಆದರೆ ಭೂಮಿಯನ್ನ ಬಿಟ್ಟುಕೊಡುವ ಪ್ರಶ್ನೆಯೆ ಇಲ್ಲ ಎಂದು ಹೇಳಿದರು.

ಉದಯವಾಹಿನಿ ಚಿತ್ರ

ಕೆಐಎಡಿಬಿ ಭೂವಿರೋಧಿ ಹೋರಾಟ ಸಮಿತಿ

ಬಿಜೆಪಿ ಮುಖಂಡ ಸೀಕಲ್ ರಾಮಚಂದ್ರಗೌಡ, ಮಾಜಿ ಶಾಸಕ ಎಂ.ರಾಜಣ್ಣ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಎನ್.ವೆಂಕಟೇಶ್ ಇತರರು ಮಾತನಾಡಿದರು. ಕೆಐಎಡಿಬಿ ಭೂ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷ ಹೀರೆಬಲ್ಲ ಕೃಷ್ಣಪ್ಪ, ರೈತ ಸಂಘದ ತಾಲ್ಲೂಕು ಅಧ್ಯಕ್ಷ ತಾದೂರು ಮಂಜುನಾಥ್, ಸೀಕಲ್ ಆನಂದಗೌಡ, ರೈತ ಸಂಘದ ನಗರ ಘಟಕದ ಅಧ್ಯಕ್ಷ ಬಿ.ನಾರಾಯಣಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ವೀರಾಪುರ ಮುನಿನಂಜಪ್ಪ, ವೇಣುಗೋಪಾಲ್, ಅಜಿತ್ ಕುಮಾರ್ ಇತರರು ಇದ್ದರು.

ಏ.25 ರಂದು ಕೆಐಎಡಿಬಿಗೆ ಜಮೀನು ನೀಡುವ ಮತ್ತು ನೀಡದಿರುವ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಆಡಳಿತವು ರೈತರಿಂದ ಅಭಿಪ್ರಾಯ ಸಂಗ್ರಹ ಮಾಡಿದ್ದು ಸರಿ. ಜಮೀನು ನೀಡುವ ರೈತರು ಬಿಳಿ ಚೀಟಿಯಲ್ಲೂ, ನೀಡದಿರುವ ರೈತರು ಪಿಂಕ್ ಚೀಟಿಯಲ್ಲೂ ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟರು. ಆದರೆ ಬಿಳಿ ಚೀಟಿ ಹಾಗೂ ಪಿಂಕ್ ಚೀಟಿ ಎಣಿಕೆ ವೇಳೆ ಯಾವೊಬ್ಬ ರೈತರನ್ನು ಬಿಟ್ಟುಕೊಳ್ಳದೆ ಸಚಿವರು, ಅಧಿಕಾರಿಗಳು ಕೊಠಡಿಯಲ್ಲಿ ಕುಳಿತು ಮತ ಎಣಿಕೆ ಮಾಡಿ ಪ್ರಕಟಿಸಿದ ಅಂಕಿ ಅಂಶಗಳ ಬಗ್ಗೆ ನಮಗೆ ಅನುಮಾನ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯಂತೆ ಪಾರದರ್ಶಕವಾಗಿ ಎಣಿಕೆ ಕಾರ್ಯ ಆಗಿಲ್ಲ. ತಮ್ಮ ಅನುಕೂಲಕ್ಕೆ ತಕ್ಕಂತೆ ಎಣಿಕೆ ಕಾರ್ಯ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು. ಹಸಿರು ಶಾಲು ಹಾಕಿಕೊಂಡ ಎಲ್ಲರೂ ರೈತರಲ್ಲ ಎಂದೆಲ್ಲಾ ಮಾತನಾಡಿದ್ದೀರಿ, ಕೆಐಎಡಿಬಿಗೆ ಏಕೆ ವಿರೋಧಿಸುತ್ತೀರಿ. ಡ್ರಿಮ್ಸ್ ಫಾರೆಸ್ಟ್ ಬಗ್ಗೆ ಏಕೆ ಧ್ವನಿ ಎತ್ತಲಿಲ್ಲ ಎಂದು ಪ್ರಶ್ನಿಸಿದ್ದೀರಿ.

ನಾವು ಡೀಮ್ಸ್ ಫಾರೆಸ್ಟ್ ಬಗ್ಗೆ ಧ್ವನಿ ಎತ್ತಿದ್ದೇವೆ. ಹೋರಾಟವನ್ನೂ ಮಾಡಿ ಡೀಮ್ಸ್ ಫಾರೆಸ್ಟ್ ವ್ಯಾಪ್ತಿಯಿಂದ ರೈತರನ್ನು ಗುಳಿ ಎಬ್ಬಿಸದಂತೆ ತಡೆದಿದ್ದೇವೆ. ಹಸಿರು ಶಾಲು ಹಾಕಿರುವುದು ರೈತರ ಕಷ್ಟಗಳಿಗೆ ಸ್ಪಂದಿಸಲು. ಹಾಗಾಗಿಯೇ ಕೆಐಎಡಿಬಿಗೆ ಜಮೀನನ್ನು ನೀಡುವುದನ್ನು ವಿರೋಧಿಸುತ್ತಿದ್ದೇವೆ. ಹಸಿರು ಶಾಲು ಬಗ್ಗೆ ಕೇವಲವಾಗಿ ಮಾತನಾಡಬೇಡಿ ಎಂದು ಎಚ್ಚರಿಕೆ ನೀಡಿದರು.

ಸಂಪಿಗೆ ಗ್ರಾಮದಲ್ಲಿ ಸ್ಮಾರ್ಟ್ ವಿಲೇಜ್ ಕೇಂದ್ರ ಉದ್ಘಾಟನೆ

• ಉದಯವಾಹಿನಿ, ತುರುವೇಕೆರೆ

ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಕನಸಾಗಿದ್ದ ಪುರ ಯೋಜನೆಯನ್ನು ಸಂಪಿಗೆಯ ಗೌರಮ್ಮ ರುದ್ರಯ್ಯ ಮಕ್ಕಳ ಕಲ್ಯಾಣ ಟ್ರಸ್ಟ್ ಸ್ವಗ್ರಾಮದಲ್ಲಿ ಸ್ಮಾರ್ಟ್ ವಿಲೇಜ್ ಕೇಂದ್ರ ತೆರೆದಿರುವುದು ಸಂತಸ ತಂದಿದೆ ಎಂದು ಇಸ್ರೋದ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಶ್ಲಾಘಿಸಿದರು. ತಾಲ್ಲೂಕಿನ ಸಂಪಿಗೆ ಗ್ರಾಮದಲ್ಲಿ ಗೌರಮ್ಮ ರುದ್ರಯ್ಯ ಮಕ್ಕಳ ಕಲ್ಯಾಣ ಟ್ರಸ್ಟ್ ವತಿಯಿಂದ ತೆರೆದಿರುವ ಸಂಪಿಗೆ ಸ್ಮಾರ್ಟ್ ವಿಲೇಜ್ ಕೇಂದ್ರದ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ ಮಾತನಾಡಿ, ರೂ.1 ಕೋಟಿ ವೆಚ್ಚದಲ್ಲಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಈ ಕೇಂದ್ರ ತೆರೆದಿರುವುದು ಶ್ಲಾಘನೀಯ. ನಾವು ಎಷ್ಟು ದಿನ ಬದುಕುತ್ತೇವೆ ಎಂಬುದು ಮುಖ್ಯವಲ್ಲ. ಇದ್ದಷ್ಟು ದಿನ ಏನೇನು ಸೇವೆ ಮಾಡಿದೆ ಎಂಬುದು ಮುಖ್ಯ. ಈ ರಾಜ್ಯ ಸರ್ಕಾರದಲ್ಲಿ ಏನೇನೂ ಅಭಿವೃದ್ಧಿ ಸಾಧ್ಯವಿಲ್ಲ. ಜನರು ಈ ರಾಜ್ಯ ಸರ್ಕಾರದಿಂದ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ' ಎಂದರು. ಸಂಪಿಗೆ ಸ್ಮಾರ್ಟ್ ವಿಲೇಜ್ ಕೇಂದ್ರದಲ್ಲಿ ಸಮುದಾಯ ಭವನ, ಪ್ರಾರ್ಥನೆ ಮತ್ತು ಪ್ರಸಾದ ಮಂದಿರ, ಒಳಾಂಗಣ ಮಕ್ಕಳ ಆಟ ಮತ್ತು ಕೌಶಲ ಅಭಿವೃದ್ಧಿ ಕೇಂದ್ರ. ಆಧುನಿಕ ಅಡುಗೆ ಮತ್ತು ಭೋಜನಾಲಯ, ಮಕ್ಕಳ ಹೊರಾಂಗಣ ಆಟದ ಪ್ರದೇಶ, ಒಳಾಂಗಣ ಆಟದ ಸೌಲಭ್ಯ, ಉದ್ಯಾನ, ಹೊರಾಂಗಣದಲ್ಲಿ ಜಿಮ್ ಸೌಲಭ್ಯ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮಾಡಲಾಗಿದೆ.

ಶಾಸಕ ಎಂ.ಟಿ.ಕೃಷ್ಣಪ್ಪ, ಸ್ಮಾರ್ಟ್ ವಿಲೇಜ್ ಕೇಂದ್ರದ ಸಂಸ್ಥಾಪಕ ಸದಾನಂದ ಮೂರ್ತಿ, ಚೌಡ್ರಿಟಿ ರಂಗಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್.ಎಚ್. ಶಿವಲಿಂಗಮೂರ್ತಿ, ಉಪಾಧ್ಯಕ್ಷೆ ಶಮಂತಕುಮಾರಿ, ಶ್ರೀಧರ್, ಸಿದ್ದೇಶ್ ನಾಗೇಂದ್ರ, ಸಂಪಿಗೆ ವಿನೋದ್, ಎಸ್.ಟಿ.ಮಲ್ಲಿಕಾರ್ಜುನ್, ವಿಜಯ್, ಸಂಗಮ್ ಎಸ್.ಆರ್.ವಿಜಯ ಕುಮಾರ್ ಇದ್ದರು.

ಉದಯವಾಹಿನಿ ಚಿತ್ರ

ಬಾಗೇಪಲ್ಲಿ ಕೆಟ್ಟು ನಿಂತ ಸಿಗ್ನಲ್ ದೀಪಗಳು: ಸವಾರರಿಗೆ ಕಿರಿ ಕಿರಿ

• ಉದಯವಾಹಿನಿ, ಬಾಗೇಪಲ್ಲಿ

ಪಟ್ಟಣದ ಡಿವಿಜಿ ಮುಖ್ಯರಸ್ತೆಯ ಸಾರ್ವಜನಿಕ ಆಸ್ಪತ್ರೆ ವೃತ್ತದಲ್ಲಿ ಸಂಚಾರ ನಿಯಂತ್ರಣಕ್ಕೆ ಹಾಕಿದ್ದ ಸಿಗ್ನಲ್ ದೀಪಗಳು ಕೆಟ್ಟು ನಿಂತಿದ್ದು, ವಾಹನ ಸವಾರರಿಗೆ ಹಾಗೂ ಪಾದಚಾರಿಗಳಿಗೆ ಕಿರಿ ಕಿರಿ ಉಂಟಾಗುತ್ತಿದೆ. ಈ ವೃತ್ತ ಮುಖ್ಯರಸ್ತೆಯಾಗಿದ್ದು, ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದ ಹಿನ್ನಲೆ ಪುರಸಭೆಯವರು ವಾಹನ ದಟ್ಟಣೆ ಕಿರಿ ಕಿರಿ ತಪ್ಪಿಸಲು 18 ಲಕ್ಷ ವೆಚ್ಚದಲ್ಲಿ ಸಿಗ್ನಲ್ ದೀಪಗಳನ್ನು ಅಳವಡಿಸಲಾಗಿತ್ತು.

ಸಿಗ್ನಲ್ ದೀಪ ಕೆಟ್ಟು ನಿಂತಿದ್ದರಿಂದ ಸಂಚಾರ ನಿಯಮಗಳ ಪಾಲನೆ ಆಗುತ್ತಿಲ್ಲ. ವಾಹನಗಳು ಅಡ್ಡಾದಿಡ್ಡಿಯಾಗಿ ಸಂಚರಿಸುತ್ತಿವೆ. ಪಾದಚಾರಿಗಳ ಸಂಚಾರಕ್ಕೆ ತೊಂದರೆಯಾಗುತ್ತಿವೆ ಎಂಬುದು ಸಾರ್ವಜನಿಕರ ದೂರಾಗಿದೆ. ಕಳೆದ ಎರಡು ತಿಂಗಳ ಹಿಂದೆ ಹೆಚ್ಚು ಭಾರವುಳ್ಳ ಲಾರಿಯೊಂದು ಟ್ರಾಫಿಕ್ ಸಿಗ್ನಲ್ ದೀಪಗಳ ಕಂಬಕ್ಕೆ ಡಿಕ್ಕಿ ಹೊಡೆದಿದ್ದರಿಂದ, ಕಂಬವು ಪೊಲೀಸ್ ಚೌಕಿ ಮೇಲೆ ಉರುಳಿತ್ತು. ನಂತರ ಪೊಲೀಸರು ಬೃಹತ್ ಯಂತ್ರದ ಮೂಲಕ ಕಂಬವನ್ನು ಮೇಲಕ್ಕೆ ಎತ್ತಿ ನಿಲ್ಲಿಸಿದ್ದರು. ಆದರೆ ಅಧಿಕಾರಿಗಳ ಸೂಕ್ತ ನಿರ್ವಹಣೆ ಇಲ್ಲದೆ ಕಂಬವು ನೆಲಕ್ಕೆ ಉರುಳುವ ಹಂತದಲ್ಲಿದೆ. ಜೊತೆಗೆ ದೀಪಗಳು ಊರಿಯುತ್ತಿಲ್ಲ ಎಂಬುದು ಸಾರ್ವಜನಿಕರ ಆರೋಪವಾಗಿದೆ.

ಉದಯವಾಹಿನಿ ಚಿತ್ರ

ಸಿಗ್ನಲ್ ಸರಿಪಡಿಸಿ ಸಂಚಾರಿ ಸಿಗ್ನಲ್ ದೀಪಗಳು ಕೆಟ್ಟು ನಿಂತ ನಂತರ ವಾಹನಗಳು ಅಡ್ಡಾದಿಡ್ಡಿಯಾಗಿ ವಾಹನಗಳು ಸಂಚರಿಸುತ್ತಿದ್ದು ಸಂಚಾರಕ್ಕೆ ತೊಂದರೆಯಾಗುತ್ತಿದೆ. ಹಾಗಾಗಿ ಸಿಗ್ನಲ್ ಸರಿಪಡಿಸಿ ಪಾದಚಾರಿಗಳ ಸಂಚಾರಕ್ಕೆ ಅನುವು ಮಾಡಿಕೊಡಿ
ಮಂಜುಳ ತರಕಾರಿ ವ್ಯಾಪಾರಿ

ಪುರಸಭೆಯು ರೂ.18 ಲಕ್ಷ ಅನುದಾನದಲ್ಲಿ ಸಿಗ್ನಲ್ ದೀಪಗಳನ್ನು ಅಳವಡಿಸಲಾಗಿದ್ದು ಈಗ ಅವು ಕೆಟ್ಟು ನಿಂತಿದ್ದು ಸಾರ್ವಜನಿಕರ ಹಣ ವ್ಯರ್ಥವಾಗಿದೆ. ಹಾಗಾಗಿ ದೀಪಗಳನ್ನು ಸರಿಪಡಿಸಿ ಟ್ರಾಫಿಕ್ ಕಿರಿ ಕಿರಿ ತಪ್ಪಿಸಬೇಕಾಗಿದೆ.
ಲೋಕೇಶ್ ಕುಮಾರ್ ಸಂತೆ ಮೈದಾನ ರಸ್ತೆ ನಿವಾಸಿ

ಜಿಲ್ಲೆಯಲ್ಲಿ 1,32,796 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಜಿಲ್ಲೆಯಲ್ಲಿ ಇನ್ನೂ ಉತ್ತಮವಾಗಿ ಮುಂಗಾರು ಮಳೆ ಸುರಿದಿಲ್ಲ. ಈ ನಡುವೆ ಪ್ರತಿ ವರ್ಷದಂತೆ ಈ ಬಾರಿಯೂ ಮುಂಗಾರು ಬಿತ್ತನೆಗೆ ಕೃಷಿ ಇಲಾಖೆಯು ಪೂರ್ವ ಸಿದ್ಧತೆ ಮಾಡಿಕೊಂಡಿದೆ. ಪ್ರಸಕ್ತ ಮುಂಗಾರು ಅವಧಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 1,32,796 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿಯನ್ನು ಕೃಷಿ ಇಲಾಖೆ ಹೊಂದಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಬಿತ್ತನೆಯ ಗುರಿ ಹೆಚ್ಚಿದೆ. 1,04,266 ಹೆಕ್ಟೇರ್‌ನಲ್ಲಿ ಏಕದಳ ಧಾನ್ಯಗಳು, 8,100 ಹೆಕ್ಟೇರ್‌ನಲ್ಲಿ ದ್ವಿದಳ ಧಾನ್ಯಗಳು, 20,230 ಹೆಕ್ಟೇರ್‌ನಲ್ಲಿ ಎಣ್ಣೆಕಾಳುಗಳು, 200 ಹೆಕ್ಟೇರ್‌ನಲ್ಲಿ ವಾಣಿಜ್ಯ ಬೆಳೆಗಳ ಬಿತ್ತನೆ ಗುರಿ ಹೊಂದಲಾಗಿದೆ.

ರಾಗಿ, ಶೇಂಗಾ ಅಧಿಕ: ರಾಗಿ, ಮುಸುಕಿನ ಜೋಳ ಮತ್ತು ಶೇಂಗಾ ಮುಂಗಾರು ಅವಧಿಯಲ್ಲಿ ಜಿಲ್ಲೆಯ ಪ್ರಮುಖ ಬಿತ್ತನೆಯ ಬೆಳೆಗಳಾಗಿವೆ. ಈ ಬಾರಿ 44,00 ಹೆಕ್ಟೇರ್‌ನಲ್ಲಿ ರಾಗಿ, 57, 166 ಹೆಕ್ಟೇರ್‌ನಲ್ಲಿ ಹೈಬ್ರಿಡ್ ಮುಸುಕಿನ ಜೋಳ, 20,000 ಹೆಕ್ಟೇರ್‌ನಲ್ಲಿ ಶೇಂಗಾ ಬಿತ್ತನೆಯ ಗುರಿ ಹೊಂದಿದೆ.

ಭತ್ತ 2,000 ಹೆಕ್ಟೇರ್, ಜೋಳ 1 ಸಾವಿರ, ತೃಣಧಾನ್ಯಗಳು 100, ತೊಗರಿ 420, ಹುರುಳಿ 1,240, ಅವರೆ 2,500, ಅಲಸಂದೆ 150, ಸೂರ್ಯಕಾಂತಿ 108, ಸಾಸಿವೆ 20, ಎಳ್ಳು 5, ಹುಚ್ಚೆಳ್ಳು 30, ಹರಳು 75, ಕಬ್ಬು 100, ಹತ್ತಿ 100 ಹೆಕ್ಟೇರ್‌ನಲ್ಲಿ ಬಿತ್ತನೆಯ ಗುರಿ ಇದೆ. ಕಳೆದ ವರ್ಷ ಜಿಲ್ಲೆಯಲ್ಲಿ 20,433 ಹೆಕ್ಟೇರ್ ಪ್ರದೇಶದಲ್ಲಿ ಎಣ್ಣೆಕಾಳುಗಳ ಬಿತ್ತನೆ ಗುರಿ ಇತ್ತು. ಈ ಬಾರಿ ಆ ಗುರಿ 20,230 ಹೆಕ್ಟೇರ್‌ಗೆ ಇಳಿಕೆ ಆಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ದ್ವಿದಳ ಧಾನ್ಯಗಳ ಬಿತ್ತನೆ ಗುರಿ ಹೆಚ್ಚಳವಾಗಿದೆ. ಕಳೆದ ಬಾರಿ 6,057 ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯ ಗುರಿ ಇತ್ತು. ಈ ಬಾರಿ ಆ ಗುರಿ ಹೆಚ್ಚಳವಾಗಿದೆ. ಪ್ರಮುಖ ಬೆಳೆಗಳ ಬಿತ್ತನೆ ಗುರಿಯು ಕಡಿಮೆ: ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ರಾಗಿ, ಶೇಂಗಾ ಮತ್ತು ಹೈಬ್ರಿಡ್ ಮುಸುಕಿನ ಜೋಳದ ಬಿತ್ತನೆ ಗುರಿಯ ಪ್ರಮಾಣ ಹೆಚ್ಚಿದೆ. ಪ್ರತಿ ವರ್ಷದಂತೆ ಈ ಬಾರಿಯೂ ಗೌರಿಬಿದನೂರು ತಾಲ್ಲೂಕಿನಲ್ಲಿ ಬಿತ್ತನೆಯ ಗುರಿ ಹೆಚ್ಚಿದೆ.

ಕಳೆದ ವರ್ಷದ ಮುಂಗಾರಿನಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ 35,531 ಹೆಕ್ಟೇರ್ ಬಿತ್ತನೆಯ ಗುರಿ ಇತ್ತು. ಈ ಬಾರಿ 37,262 ಹೆಕ್ಟೇರ್ ಪ್ರಮಾಣದ ಬಿತ್ತನೆ ಗುರಿಯನ್ನು ಇಲಾಖೆ ಹೊಂದಿದೆ. ಈ ಹಿಂದಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ಮುಂಗಾರು ಮಳೆ ಕೈಕೊಟ್ಟಿತ್ತು. ಅದಕ್ಕೂ ಹಿಂದಿನ ಎರಡು ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಉತ್ತಮ ಮಳೆ ಆಗಿತ್ತು. 2021 ಮತ್ತು 2022ರಲ್ಲಿ ಜಿಲ್ಲೆಯಲ್ಲಿ ಉತ್ತಮವಾಗಿ ಬಿತ್ತನೆ ಆಗಿತ್ತು. ಆದರೆ ಕಳೆದ ಎರಡು ವರ್ಷಗಳ ಮಳೆ ಇಲ್ಲದ ಕಾರಣ ಬಿತ್ತನೆಯೂ ಕುಂಠಿತವಾಗಿತ್ತು. ಬಿತ್ತನೆಯಾದ ಪ್ರದೇಶದಲ್ಲಿಯೂ ಬೆಳೆ ಬಂದಿರಲಿಲ್ಲ. ಈ ಬಾರಿ ಬಿತ್ತನೆಗೆ ರಸಗೊಬ್ಬರ, ಬಿತ್ತನೆ ಬೀಜಗಳನ್ನು ಸಿದ್ಧಗೊಳಿಸಿಕೊಳ್ಳಲಾಗಿದೆ. ಯಾವುದೇ ಕೊರತೆಗಳು ಎದುರಾಗುವುದಿಲ್ಲ. ಸಿದ್ಧತೆಗಳನ್ನು ಈಗಾಗಲೇ ಮಾಡಿಕೊಳ್ಳಲಾಗಿದೆ ಎಂದು ಕೃಷಿ ಇಲಾಖೆ ಮೂಲಗಳು ತಿಳಿಸುತ್ತವೆ.

ಉದಯವಾಹಿನಿ ಚಿತ್ರ

ಅಮೃತೂರು ಪಟ್ಟಲದಮ್ಮ ಜಾತ್ರಾ ಮಹೋತ್ಸವ

• ಉದಯವಾಹಿನಿ, ಕುಣಿಗಲ್

ತಾಲ್ಲೂಕಿನ ಅಮೃತೂರು ಪಟ್ಟಲದಮ್ಮ ಜಾತ್ರಾ ಮಹೋತ್ಸವದಲ್ಲಿ ಯುವಕರ ನಡುವೆ ನಡೆದ ಕಿತ್ತಾಟದ ಬಗ್ಗೆ ಗಾಳಿ ಸುದ್ದಿ ಹಬ್ಬಿತ್ತು. ನಂತರ ಗ್ರಾಮಸ್ಥರ ತಂಡ ಕಾಲೊನಿಗೆ ನುಗ್ಗಲು ಯತ್ನಿಸಿ ನಂತರ ಪೊಲೀಸರ ವಶದಲ್ಲಿ ಯುವಕನನ್ನು ಒಪ್ಪಿಸಲು ಆಗ್ರಹಿಸಿ, ರಾತ್ರಿ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಲಾಠಿ ರುಚಿ ತೋರಿಸಿ ಚದುರಿಸಿದರು. ಜಾತ್ರಾ ಸಮಯದಲ್ಲಿ (ಭಾನುವಾರ ಸಂಜೆ) ರಾಜಕೀಯ ಮುಖಂಡನ ಮಗನ ಮೇಲೆ ಕ್ಷುಲಕ ಕಾರಣಕ್ಕೆ ಜಾತ್ರೆಗೆಂದು ಬಂದಿದ್ದ ದಲಿತ ಯುವಕ ಛೇಡಿಸಿದ್ದು, ಅಸಮಾಧಾನಗೊಂಡ ಮುಖಂಡನ ಮಗ, ತಂದೆಗೆ ಕರೆಮಾಡಿ ವಿಷಯ ತಿಳಿಸಿದಾಗ ಮುಖಂಡ ಮತ್ತು ಬೆಂಬಲಿಗರು ಬಂದು ಯುವಕನನ್ನು ಥಳಿಸಿದ್ದರು.

ಪೊಲೀಸರು ಲಾಠಿ ಪ್ರಹಾರ ಮಾಡಿ ಗುಂಪನ್ನು ಚದುರಿಸಿದೆ. ಡಿವೈಎಸ್ಪಿ ಓಂ ಪ್ರಕಾಶ್, ಸಿಪಿಐ ಮಾದ್ಯಾ ನಾಯಕ್ ಸ್ಥಳಕ್ಕೆ ಭೇಟಿ ನೀಡಿ ರಾಜಕೀಯ ಮುಖಂಡರ ನೇತೃತ್ವದಲ್ಲಿ ವಿಚಾರಣೆ ನಡೆಸಿ ರಾಜಿ ಸಂಧಾನದ ಮೂಲಕ ಗೊಂದಲಕ್ಕೆ ತೆರೆ ಎಳೆದರು.

ಉದಯವಾಹಿನಿ ಚಿತ್ರ

ರಾತ್ರಿಯಾಗುತ್ತಿದ್ದಂತೆ ಯುವಕ, ಮುಖಂಡನ ಮಗಳೊಂದಿಗೆ ಅನುಚಿತವಾಗಿ ವರ್ತಿಸಿದ್ದಾನೆ ಎಂಬ ವದಂತಿ ಹಬ್ಬಿತು. ಸುಮಾರು ಆರು ನೂರಕ್ಕೂ ಹೆಚ್ಚಿನ ಗ್ರಾಮಸ್ಥರ ತಂಡ ಯುವಕನ ಕಾಲೊನಿಗೆ ನುಗ್ಗಲು ಯತ್ನಿಸಿದೆ. ಪೊಲೀಸರ ಸಮಯಪ್ರಜ್ಞೆಯಿಂದ ಯುವಕನನ್ನು ವಿಚಾರಣೆಗೆ ಠಾಣೆಗೆ ಕರೆತರಲಾಗಿದ್ದು, ಗ್ರಾಮಸ್ಥರ ತಂಡ ಠಾಣೆಗೆ ಮುತ್ತಿಗೆ ಹಾಕಿ ಯುವಕನನ್ನು ವಶಕ್ಕೆ ನೀಡಲು ಆಗ್ರಹಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ: ಎಡವಿದ ವಸತಿ ಶಾಲೆ, ಹಾಸ್ಟೆಲ್: ಫಲಿತಾಂಶದಲ್ಲಿ ಕುಸಿತ

• ಉದಯವಾಹಿನಿ, ಮೈಸೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ತವರಾದ ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ವಸತಿಶಾಲೆಗಳು 2024-25ನೇ ಸಾಲಿನ ಎಸ್‌ಎಸ್‌

ಅಂತರಾಳದಿಂದ... EDITORIAL

ಮತೀಯ ದ್ವೇಷ ಕೊನೆಗೊಳಿಸಲು ಸರ್ಕಾರ ತೋರಬೇಕಿದೆ ಇಚ್ಛಾಶಕ್ತಿ

ರಾಜ್ಯದ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯು ಉದ್ಯಮಶೀಲತೆ, ಸಾಂಸ್ಕೃತಿಕ ಪರಂಪರೆ, ಶೈಕ್ಷಣಿಕ ಸಾಧನೆಯಂತಹ ಹಲವು ವಿಷಯಗಳಲ್ಲಿ ದೇಶಕ್ಕೆ ಮಾದರಿ. ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ವಿಜಯಾ ಬ್ಯಾಂಕ್ ಸೇರಿದಂತೆ ಹಲವು ಬೃಹತ್ ಬ್ಯಾಂಕ್‌ಗಳು ಕೂಡ ಈ ನೆಲದಲ್ಲೇ ಹುಟ್ಟಿದವು. ಪ್ರಾಥಮಿಕ, ಪ್ರೌಢಶಿಕ್ಷಣ ಮಾತ್ರವಲ್ಲ, ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲೂ ಈ ಜಿಲ್ಲೆಗಳು ಮುಂಚೂಣಿಯಲ್ಲಿವೆ. ಹೋಟೆಲ್ ಉದ್ಯಮದಲ್ಲಿ ಇಲ್ಲಿನ ಜನ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದಾರೆ. ಸೌಹಾರ್ದಕ್ಕೆ ಹೆಸರಾಗಿದ್ದ ಈ ಜಿಲ್ಲೆಗಳು ಹಲವು ವರ್ಷಗಳಿಂದ ಕೋಮು ಧ್ರುವೀಕರಣದ ಪ್ರಯೋಗಶಾಲೆಯಾಗಿ ಪರಿವರ್ತನೆ ಹೊಂದಿವೆ. ಕೋಮು ಹಿಂಸೆಯ ದಳ್ಳುರಿಗೆ ಎರಡೂ ಜಿಲ್ಲೆಗಳು ನಲುಗಿವೆ. ಅಭಿವೃದ್ಧಿಪಥದಲ್ಲಿ ದೇಶಕ್ಕೆ ಮಾದರಿಯಾದ ರಾಜ್ಯದ ಕರಾವಳಿಯಲ್ಲಿ ಈಗ ಮತೀಯವಾದ ಅರ್ಭಟಿಸುತ್ತಿದೆ. ಹಿಂದೂಗಳು, ಮುಸ್ಲಿಮರ ನಡುವೆ ಅನುಮಾನದ ಕಂದಕ ಸೃಷ್ಟಿಯಾಗಿದೆ. ಏಪ್ರಿಲ್ 27ರಂದು ಮಂಗಳೂರು ಹೊರವಲಯದ ಕುಡುಪು ಎಂಬಲ್ಲಿ ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಿದ್ದ ಸ್ಥಳದಲ್ಲಿ ಕೇರಳದ ವಯನಾಡು ಜಿಲ್ಲೆಯ ಅಶ್ರಫ್ ಎಂಬ ವ್ಯಕ್ತಿಯನ್ನು ಗುಂಪು ಹಲ್ಲೆ ನಡೆಸಿ, ಹತ್ಯೆ ಮಾಡಲಾಗಿತ್ತು.

ಘಟನೆಯ ಪ್ರತ್ಯಕ್ಷದರ್ಶಿಗಳು ಕರೆ ಮಾಡಿ ಮಾಹಿತಿ ನೀಡಿದ್ದರೂ ಅದಕ್ಕೆ ಸ್ಪಂದಿಸದೇ ಪೊಲೀಸ್ ಸಹಾಯವಾಣಿಗೆ ಕರೆ ಮಾಡುವಂತೆ ಸೂಚಿಸಿ, ಕರ್ತವ್ಯಲೋಪ ಎಸಗಿದ್ದ ಆರೋಪದ ಮೇಲೆ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ. ವೈಯಕ್ತಿಕ ದ್ವೇಷದಿಂದ ಕೊಲೆಯಾದವರಿಗೂ ಹುತಾತ್ಮರ ಪಟ್ಟ ಕಟ್ಟುವ ಪ್ರಯತ್ನಗಳು ಇಲ್ಲಿ ಪದೇ ಪದೇ ಘಟಿಸಿವೆ. ಧರ್ಮಾಧಾರಿತ ಸಂಘಟನೆಗಳ ಮುಖಂಡರ ಜೊತೆ ರಾಜಕೀಯ ನಾಯಕರೂ ಇದರಲ್ಲಿ ಶಾಮೀಲಾಗಿದ್ದಾರೆ. ದ್ವೇಷ ಕೆರಳಿಸುವ ಮಾತುಗಳ ಪರಿಣಾಮವಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಮೇ 1ರ ಬಳಿಕ ಸರಣಿಯೋಪಾದಿಯಲ್ಲಿ ಮತೀಯ ದ್ವೇಷದ ಹಿಂಸಾಕೃತ್ಯಗಳು ನಡೆದಿವೆ. ಹತ್ಯೆಗೆ-ಹತ್ಯೆ ಎಂಬ ಪ್ರತೀಕಾರದ ನಡೆಗೆ ನಾಗರಿಕ ಸಮಾಜದಲ್ಲಿ ಅವಕಾಶವಿಲ್ಲ. ಈ ಬಗೆಯ ದುಷ್ಕೃತ್ಯಗಳನ್ನು ಯಾವುದೇ ಮುಲಾಜಿಗೆ ಒಳಗಾಗದೇ ಹತ್ತಿಕ್ಕುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡಬೇಕು. ಮತೀಯ ಧ್ರುವೀಕರಣದ ಮೂಲಕ ರಾಜಕೀಯ ಲಾಭ ಪಡೆಯಲು ಕಾದು ಕುಳಿತ ರಾಜಕೀಯ ನಾಯಕರು, ದ್ವೇಷೋನ್ಮಾದವನ್ನು ಪ್ರಚೋದಿಸುವ ಕೆಲವು ಸಂಘಟನೆಗಳ ಮುಖಂಡರು ಹೊತ್ತಿಕೊಂಡ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಾರೆ. ದ್ವೇಷ ಕೆರಳಿಸಿ, ರಕ್ತ ಹರಿಸಿ ಲಾಭ ಪಡೆಯಲು ಹವಣಿಸುವವರು ಎಲ್ಲಾ ಧರ್ಮಗಳಲ್ಲೂ ಇದ್ದಾರೆ. ಸಾಮಾಜಿಕ ಮಾಧ್ಯಮಗಳ ಪ್ರಭಾವ ಬಲವಾಗಿರುವ ಈ ಕಾಲಘಟ್ಟದಲ್ಲಿ ಇಂತಹ ಪ್ರಚೋದನೆ ಬಹುಬೇಗ ಜನರನ್ನು ಆವರಿಸುತ್ತದೆ. ಕರಾವಳಿ ಜಿಲ್ಲೆಗಳಲ್ಲಿ ಮತೀಯ ದ್ವೇಷದ ಹಿಂಸೆ ತಡೆಗೆ 'ಕೋಮುಹಿಂಸೆ ನಿಗ್ರಹ ಕಾರ್ಯಪಡೆ' ರಚಿಸುವುದಾಗಿ ಗೃಹ ಸಚಿವ ಜಿ. ಪರಮೇಶ್ವರ ಘೋಷಿಸಿದ್ದಾರೆ. ಇದು ಉತ್ತಮ ನಿರ್ಧಾರ. ಆದರೆ, ಕೋಮು ಹಿಂಸೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆ, ದುಷ್ಕೃತ್ಯಗಳ ನಿಗ್ರಹದ ವಿಷಯದಲ್ಲಿ ಪೊಲೀಸರು ಕಠಿಣ ನಿಲುವು ತೆಗೆದುಕೊಂಡರೆ ಮಾತ್ರ ಪರಿಸ್ಥಿತಿ ಹತೋಟಿಗೆ ಬರಲು ಸಾಧ್ಯ. ಮತೀಯ ದ್ವೇಷವನ್ನು ಪ್ರಚೋದಿಸುವ ರಾಜಕೀಯ ನಾಯಕರು, ಸಂಘಟನೆಗಳ ಮುಖಂಡರ ವಿರುದ್ಧವೂ ಕಾನೂನಿನ ಅಸ್ತ್ರ ಪ್ರಯೋಗಿಸುವ ಮೂಲಕ ಇಂತಹ ಚಟುವಟಿಕೆಗಳನ್ನು ಸಹಿಸುವುದಿಲ್ಲ ಎಂಬ ಬಲವಾದ ಸಂದೇಶವನ್ನು ಸರ್ಕಾರ ರವಾನಿಸಬೇಕು. ಕರಾವಳಿಯ ಜನರು ಸೌಹಾರ್ದದ ಪರವಾಗಿ ದಿಟ್ಟತನದಿಂದ ನಿಂತರಷ್ಟೇ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ. ಇಂತಹ ಕೃತ್ಯಗಳಿಂದ ರಾಜಕೀಯ, ಇತರ ಲಾಭ ಪಡೆಯಲು ಪ್ರಯತ್ನಿಸುವ ವ್ಯಕ್ತಿ, ಸಂಘಟನೆ, ರಾಜಕೀಯ ಪಕ್ಷಗಳನ್ನು ಈ ಜಿಲ್ಲೆಯ ಜನರು ದೂರ ಇಡಬೇಕು. ಮತೀಯ ದ್ವೇಷವನ್ನು ಬದಿಗೊತ್ತಿ ಅಭಿವೃದ್ಧಿ ಪಥವನ್ನು ಆಯ್ಕೆ ಮಾಡಿಕೊಳ್ಳುವ ವಿಚಾರದಲ್ಲಿ ಜನರು ತೋರುವ ಧೈರ್ಯವೇ ಈ ಜಿಲ್ಲೆಗಳ ಭವಿಷ್ಯವನ್ನು ನಿರ್ಧರಿಸುತ್ತದೆ. ಈ ದಿಸೆಯಲ್ಲಿ ಕಠಿಣವಾದ ನಿಲುವು ತಾಳುವ ಮೂಲಕ ಕರಾವಳಿಯ ಜಿಲ್ಲೆಗಳಿಗೆ ಪಾರಂಪರಿಕವಾಗಿ ಇದ್ದ ಘನತೆ ಮತ್ತು ವೈಭವವನ್ನು ಮರಳಿ ತಂದುಕೊಡುವ ಪ್ರಯತ್ನ ಜನರಿಂದಲೇ ಆರಂಭವಾಗಲಿ.

ಇನ್ನೊಂದು ಪ್ರಕರಣದಲ್ಲಿ ಬಜಪೆಯ ಕಿನ್ನಿಪದವು ಎಂಬಲ್ಲಿ ಹಿಂದುತ್ವ ಪರ ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದ ರೌಡಿಶೀಟರ್ ಸುಹಾಸ್ ಶೆಟ್ಟಿ ಎಂಬಾತನನ್ನು ಎದುರಾಳಿ ಗುಂಪೊಂದು ಹತ್ಯೆ ಮಾಡಿದೆ. ರೌಡಿಗಳಿಬ್ಬರ ಮಧ್ಯದ ಸಂಘರ್ಷದಲ್ಲಿ ಕೊಲೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ. ಆದರೂ ಪ್ರಕರಣಕ್ಕೆ ಮತೀಯ ಬಣ್ಣ ಲೇಪಿಸಿ, ಸಾಮರಸ್ಯ ಕದಡುವ ಪ್ರಯತ್ನ ಕರಾವಳಿಯಲ್ಲಿ ನಡೆದಿದೆ.

ಋಣಭಾರ

ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಗತ್ತಿನ ಎಲ್ಲಾ ಅಪ್ಪಂದಿರು ಬಹುತೇಕ ಸಾಲಗಾರರೇ. ಆತಸಾಲಮಾಡುತ್ತಾನೆ, ಮಗನ ಓದಿಗಾಗಿ, ಅಮ್ಮನ ಓಲೆಗಾಗಿ, ತನ್ನ ರೋಗಕ್ಕಾಗಿ, ಗೆಳೆಯನ ಕಷ್ಟಕ್ಕಾಗಿ, ಮಗ, ಮಗಳ ಬರ್ತಡೇ ಗಿಫ್ಟ್‌ಗಾಗಿ, ಪೋಸ್ಟ್ ಆಫೀಸಿನ ಆರ್ ಡಿ ಅಕೌಂಟ್‌ಗಾಗಿ, ಲೈಫ್ ಇನ್ಸೂರೆನ್ಸ್‌ನ ಪ್ರಿಮಿಯಮ್ ಹಣಕ್ಕಾಗಿ, ನಿಮ್ಮ ಕೋರ್ಸಿಗೆ ಬೇಕೇ ಬೇಕು ಎಂದು ನೀವು ಹಠ ಹಿಡಿದು ಕೊಡಿಸಿಕೊಳ್ಳುವ ಕಂಪ್ಯೂಟರ್‌ಗಾಗಿ, ಗೆಳೆಯರೆಲ್ಲರ ಬಳಿ ಇರುವ ದುಬಾರಿ ಬೈಕು ನಿಮಗೂ ಬೇಕೆಂದಾಗ, ಸೆಕೆಂಡ್ ಇನಸ್ಟಾಲ್ ಮೆಂಟ್ ಫೀ ಬಾಕಿ ಇದೆ ಎಂದು ಮಗನ ಕಾಲೇಜಿನಿಂದ ಲೆಟರ್ ಬಂದಾಗ, ಹಾಸ್ಟೆಲ್‌ನಿಂದ ಫೋನ್ ಮಾಡಿದ ಮಗಳು ಪ್ರಾಜೆಕ್ಟ್ ಮಾಡಲು ಇಂಟರ್ನೆಟ್ ಬೇಕೆಂದಾಗ, ಸಂಬಂಧಿಕರ ಮದುವೆಗೆ ಹೋಗಲು ಮೈಸೂರು ಸಿಲ್ಕ್ ಸೀರೆಯೇ ಬೇಕೆಂದು ಅಮ್ಮ ಕೋಪದಿಂದ ಕೋಣೆ ಸೇರಿ ಕೂತಾಗ, ಅಜ್ಜ, ಅಜ್ಜಿಯ ಅನಾರೋಗ್ಯ ಕಂಗೆಡಿಸಿದಾಗ, ದೂರ ದೂರಿನಿಂದ ಮಗ ಕಾಲ್ ಮಾಡಿ ನಾನು ಗೆಳೆಯರೊಡನೆ ಉತ್ತರ ಭಾರತ ಪ್ರವಾಸ ಹೋಗಬೇಕೆಂದಾಗ... ಹೀಗೆ ಅದೆಷ್ಟೋ ಬಾರಿ ಸಾಲಗಾರನಾಗುವ ಈ ಅಪ್ಪ ಅದರಲ್ಲಿ ಎಷ್ಟೋ ಸಾಲದ ಬಗ್ಗೆ ಮನೆಯವರಿಗೆ ಗಮನಕ್ಕೆ ಬಾರದಂತೆ ನೋಡಿಕೊಳ್ಳುತ್ತಾನೆ. ಕೆಲವೊಮ್ಮೆ ಸಾಯುವ ತನಕ ಸಾಲದಲ್ಲೇ ಮುಳುಗಿ ಮಕ್ಕಳಿಂದ ಭೀಮಾರಿ ಹಾಕಿಸಿಕೊಳ್ಳುವುದೂ ಉಂಟು. ಯಾವೊಬ್ಬ ಸಾಲಗಾರನೂ ಮನೆಯವರೆಗೆ ಬರದಂತೆ ನೋಡಿಕೊಳ್ಳಲು ಆತ ಮಾಡುವ ಹರಸಾಹಸಗಳು ಅಷ್ಟಿಷ್ಟಲ್ಲ, ಇಷ್ಟೆಲ್ಲ ಸಾಲ ಮಾಡಿದ ಅಪ್ಪನ ಋಣಭಾರ ನಮ್ಮ ಮೇಲಿದೆ ಎಂಬುದನ್ನು ನಾವು ಮರೆಯದಿದ್ದರೆ ಸಾಕು, ಮಹತ್ತರವಾದುದೊಂದು ಓದಿಬಿಡುತ್ತೇನೆ, ಏನೋ ಸಾಧಿಸಿ ಬಿಡುತ್ತೇನೆಂದು ನೀವು ಲಗ್ಗೇಜ್ ರೆಡಿಮಾಡಿಕೊಂಡು ದೂರದ ಪಟ್ಟಣಕ್ಕೆ ಹೊರಟು ನಿಂತಿರುತ್ತೀರಿ. ಆಗ ತನ್ನ ಪಂಚೆಯೊಳಗಿನ ನಿಕ್ಕರ್‌ನಿಂದ ಹಣ ತೆಗೆದುಕೊಟ್ಟು ಬಸ್ ಸ್ಟಾಪ್ ತನಕ ಬಂದು, ಒಂದಷ್ಟು ಮಾತ್ರೆ, ಒಂದು ಬಿಸ್ಕತ್ ಪ್ಯಾಕ್ ಕೊಟ್ಟು, ತನ್ನ ಅಂಗಿ ಕಿಸೆಯಲ್ಲಿದ್ದ ಕೊನೆಯ 100 ರೂಪಾಯಿಯನ್ನೂ ನಿಮ್ಮ ಕಿಸೆಗೆ ತುರುಕಿ 'ಅದು ಪಟ್ಟಣ, ಅಲ್ಲಿ ಖರ್ಚು ಬಾಳ ಇರುತ್ತೆ ಇಟ್ಕೋ ಅಂತ ಹೇಳಿ ತನ್ನ ಕಣ್ಣಂಚಲ್ಲಿ ಸಣ್ಣಗೆ ತೇವಮಾಡಿಕೊಂಡು ಮರೆಯಾಗುತ್ತಾನಲ್ಲ ಅದಕ್ಕೆ ಅಪ್ಪನೇ ಬೇಕು, ತನ್ನ ಕಷ್ಟಗಳನ್ನು ಅಮ್ಮ ಹತ್ರ ಬಿಚ್ಚಿಡಲಾರ. ಮಕ್ಕಳನ್ನು ಪರಿಪೂರ್ಣವಾಗಿಸಲು ತಾನು ಪೂರ್ತಿ ಖಾಲಿಯಾಗಲು ಸಿದ್ಧನಾಗುತ್ತಾನಲ್ಲ ಅದಕ್ಕೇ ಈ ಅಪ್ಪನ ಕುರಿತು ಬರಿಯಬೇಕೆನಿಸಿದ್ದು.

ಡಿಸಿಸಿಐ ಇಂಡಿಯಾ vs ಶ್ರೀಲಂಕಾ ಸರಣಿ ತಾರೆಯರೊಂದಿಗೆ ಕ್ರಿಕೆಟ್ ಸೌಹಾರ್ದತೆ

• ಉದಯವಾಹಿನಿ, ಬೆಂಗಳೂರು

ಓಲ್ಡ್ ಮದ್ರಾಸ್ ರಸ್ತೆಯಲ್ಲಿರುವ ಗೋಪಾಲನ್ ಸಿಗ್ನೇಚರ್ ಮಾಲ್, ನಡೆಯುತ್ತಿರುವ ಡಿಸಿಸಿಐ ಇಂಡಿಯಾ ಶ್ರೀಲಂಕಾ ಸರಣಿಯ ಆಟಗಾರರನ್ನು ಒಳಗೊಂಡ ಮೀಟ್ ಗ್ರೀಟ್ ಕಾರ್ಯಕ್ರಮವನ್ನು ಆಯೋಜಿಸಿದಾಗ ಉತ್ಸಾಹ, ಸಂಭ್ರಮದ ಸಂಜೆಗೆ ಸಾಕ್ಷಿಯಾಯಿತು. ಈ ಕಾರ್ಯಕ್ರಮವು ಕ್ರಿಕೆಟ್ ಉತ್ಸಾಹಿಗಳನ್ನು ಅನೌಪಚಾರಿಕ, ಉತ್ಸಾಹ ಭರಿತ ಸನ್ನಿವೇಶದಲ್ಲಿ ತಮ್ಮ ನೆಚ್ಚಿನ ಕ್ರೀಡಾಪಟುಗಳಿಗೆ ಹತ್ತಿರವಾಗಿಸಿತು.

ನಾಯಕರಾದ ವಿಕ್ರಾಂತ್ ರವೀಂದ್ರ ಕೇಣಿ (ಭಾರತ), ಧನಂಜಯ ಡಿ ಸಿಲ್ವಾ (ಶ್ರೀಲಂಕಾ), ತಮ್ಮ ತಂಡಗಳೊಂದಿಗೆ, ಅಭಿಮಾನಿಗಳೊಂದಿಗೆ ಸಂವಹನ ನಡೆಸಿದರು, ಛಾಯಾಚಿತ್ರಗಳಿಗೆ ಪೋಸ್ ನೀಡಿದರು ಮತ್ತು ಸರಣಿಯ ಒಳನೋಟಗಳನ್ನು ಹಂಚಿಕೊಂಡರು. ಎಲ್ಲಾ ವಯಸ್ಸಿನ ಅಭಿಮಾನಿಗಳು ಆಟಗಾರರೊಂದಿಗೆ ತೊಡಗಿಸಿಕೊಂಡಿದ್ದರಿಂದ ವಾತಾವರಣವು ಉತ್ಸಾಹದಿಂದ ತುಂಬಿತ್ತು.

ಕ್ರೀಡೆ ಮತ್ತು ಸಂಸ್ಕೃತಿಯಂತಹ ಹಂಚಿಕೆಯ ಆಸಕ್ತಿಗಳ ಮೂಲಕ ಜನರನ್ನು ಸಂಪರ್ಕಿಸುವ ಅನುಭವಗಳನ್ನು ನೀಡುವ ಮೂಲಕ, ಗೋಪಾಲನ್ ತನ್ನ ಸ್ಥಳಗಳನ್ನು ಹೆಚ್ಚು ಆಕರ್ಷಕವಾಗಿ ಮತ್ತು ಸಮುದಾಯ-ಆಧಾರಿತವಾಗಿಸಲು ಮಾಡಿದ ಪ್ರಯತ್ನಕ್ಕೆ ಅನುಗುಣವಾಗಿ ಈ ಕಾರ್ಯಕ್ರಮ ನಡೆಯಿತು.

ಮೆಂತ್ಯ ನೀರು ಕುಡಿಯೋರು ಮೊದಲು ನಿಮ್ಗೆ ಬಿಪಿ ಇದ್ಯಾ ಚೆಕ್‌ಮಾಡ್ಕೋಳ್ಳಿ

ಮೆಂತ್ಯ ನೀರು ಮಧುಮೇಹಿಗಳಿಗೆ ಒಳ್ಳೆಯದು ಆದ್ರೆ ನಿಮ್ಗೆ ಬಿಪಿ, ಹೃದಯದ ಸಮಸ್ಯೆ ಇದ್ರೆ ಇದು ಒಳ್ಳೆಯದಲ್ಲ, ಇವರು ಮೆಂತ್ಯ ನೀರು ಕುಡಿಯೋದು ಪ್ರಯೋಜನಕ್ಕಿಂತ ಅಡ್ಡಪರಿಣಾಮಗಳೇ ಹೆಚ್ಚಾಗುವುದು ಎಚ್ಚರ. ಮೆಂತ್ಯ ನೀರು ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ಇದು ಮಧುಮೇಹಿಗಳಲ್ಲಿ ಸಕ್ಕರೆಯ ಮಟ್ಟವನ್ನು ಕಂಟ್ರೋಲ್‌ನಲ್ಲಿಡಲು, ತೂಕ ಇಳಿಸಿಕೊಳ್ಳಲು ಸಹಕಾರಿಯಾಗಿದೆ. ಇದು ಜೀರ್ಣಕ್ರಿಯೆ, ಚರ್ಮವನ್ನು ಸುಧಾರಿಸಲು ಒಳ್ಳೆಯದು ಎನ್ನಲಾಗುತ್ತದೆ. ಆದರೆ ಮೆಂತ್ಯ ನೀರು ಕೆಲವು ಜನರಿಗೆ ಹಾನಿಕಾರಕ ಎನ್ನುವುದು ನಿಮಗೆ ತಿಳಿದಿದೆಯೇ?. ಹೌದು, ಮೆಂತ್ಯ ನೀರು ಕೆಲವು ಪರಿಸ್ಥಿತಿಗಳಲ್ಲಿ ಪ್ರಯೋಜನದ ಬದಲು ಹಾನಿಯನ್ನುಂಟುಮಾಡಬಹುದು. ಆದ್ದರಿಂದ, ಅಂತಹ ಸಂದರ್ಭಗಳಲ್ಲಿ ಮೆಂತ್ಯ ನೀರನ್ನು ಕುಡಿಯುವುದನ್ನು ತಪ್ಪಿಸಬೇಕು ಯಾವ 5 ಜನರು ಈ ಮೆಂತ್ಯ ನೀರನ್ನು ಕುಡಿಯಬಾರದು ಎನ್ನುವುದನ್ನು ತಿಳಿಯೋಣ.



ಮೆಂತ್ಯ ನೀರನ್ನು ಯಾರೆಲ್ಲಾ ಕುಡಿಯಬಾರದು?

ಕಡಿಮೆ ರಕ್ತದ ಸಕ್ಕರೆ (ಹೈಪೊಗ್ಲಿಸಿಮಿಯಾ) ಹೊಂದಿರುವ ರೋಗಿಗಳು: ಮೆಂತ್ಯ ನೀರು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇದು ಮಧುಮೇಹ ರೋಗಿಗಳಿಗೆ ಪ್ರಯೋಜನಕಾರಿಯಾಗಿದೆ. ಆದರೆ ಯಾರೊಬ್ಬರ ರಕ್ತದಲ್ಲಿನ ಸಕ್ಕರೆ ಈಗಾಗಲೇ ಕಡಿಮೆಯಾಗಿದ್ದರೆ. ಅಂತಹವರು ಮೆಂತ್ಯ ನೀರನ್ನು ಕುಡಿಯುವುದರಿಂದ ಅವರ ಸಕ್ಕರೆ ಮಟ್ಟ ಮತ್ತಷ್ಟು ಇಳಿಯಬಹುದು. ಇದು ತಲೆತಿರುಗುವಿಕೆ, ದೌರ್ಬಲ್ಯ, ಮೂರ್ಛೆ ಹೋಗುವಂತಹ ಸಮಸ್ಯೆಗಳನ್ನು ಉಂಟುಮಾಡಬಹುದು.

ರಕ್ತದೊತ್ತಡ ಔಷಧಿಗಳನ್ನು ತೆಗೆದುಕೊಳ್ಳುತ್ತಿರುವ ರೋಗಿಗಳು: ಮೆಂತ್ಯ ನೀರು ರಕ್ತದೊತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಒಬ್ಬ ವ್ಯಕ್ತಿಯು ಈಗಾಗಲೇ ಅಧಿಕ ರಕ್ತದೊತ್ತಡಕ್ಕೆ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದರೆ, ಮೆಂತ್ಯ ನೀರನ್ನು ಕುಡಿಯುವುದರಿಂದ ಅವರ ರಕ್ತ ದೊತ್ತಡ ಇದ್ದಕ್ಕಿದ್ದಂತೆ ಕಡಿಮೆಯಾಗುತ್ತದೆ. ಇದು ತಲೆತಿರುಗುವಿಕೆ, ಆಯಾಸ, ಮೂರ್ಛೆ ಹೋಗುವಂತಹ ಸಮಸ್ಯೆಗಳನ್ನು ಉಂಟುಮಾಡಬಹುದು.

ಗರ್ಭಿಣಿಯರಿಗೆ ಒಳ್ಳೆಯದಲ್ಲ

ಗರ್ಭಾವಸ್ಥೆಯಲ್ಲಿ ಮೆಂತ್ಯ ನೀರನ್ನು ಕುಡಿಯುವುದನ್ನು ತಪ್ಪಿಸಬೇಕು. ಮೆಂತ್ಯದಲ್ಲಿರುವ ಅಂಶಗಳ ಕಾರಣದಿಂದಾಗಿ ಅಕಾಲಿಕ ಹೆರಿಗೆ ನೋವು ಉಂಟಾಗುವ ಅಪಾಯವಿರಬಹುದು. ಹೆರಿಗೆಯ ನಂತರ ಹಾಲುಣಿಸುವಿಕೆಯನ್ನು ಹೆಚ್ಚಿಸಲು ಮೆಂತ್ಯ ಸಹಾಯಕವಾಗಿದ್ದರೂ, ಗರ್ಭಾವಸ್ಥೆಯಲ್ಲಿ ಇದನ್ನು ಸೇವಿಸುವುದನ್ನು ತಪ್ಪಿಸಬೇಕು. ಹೆರಿಗೆ ನಂತರ ಬೇಕಾದರೆ ಸೇವಿಸಬಹುದು.

ತೀವ್ರ ಹೊಟ್ಟೆ ಸಮಸ್ಯೆಗಳಿಂದ ಬಳಲುತ್ತಿರುವ ಜನರು

ಮೆಂತ್ಯ ನೀರನ್ನು ಜೀರ್ಣಾಂಗ ವ್ಯವಸ್ಥೆಗೆ ಒಳ್ಳೆಯದು ಎಂದು ಪರಿಗಣಿಸಲಾಗುತ್ತದೆ, ಆದರೆ ಯಾರಿಗಾದರೂ ಗ್ಯಾಸ್ಟ್ರಿಕ್ ಅಲ್ಸರ್, ಆಮ್ಲೀಯತೆ ಅಥವಾ ಕರುಳಿನಲ್ಲಿ ಉರಿಯೂತದಂತಹ ಸಮಸ್ಯೆಗಳಿದ್ದರೆ, ಮೆಂತ್ಯ ನೀರನ್ನು ಕುಡಿಯುವುದರಿಂದ ಸಮಸ್ಯೆ ಹೆಚ್ಚಾಗುತ್ತದೆ. ಮೆಂತ್ಯವು ಹೆಚ್ಚಿನ ಪ್ರಮಾಣದ ಫೈಬರ್ ಅನ್ನು ಹೊಂದಿರುತ್ತದೆ. ಇದು ಹೊಟ್ಟೆಯಲ್ಲಿ ಆನಿಲ ಮತ್ತು ನೋವನ್ನು ಉಂಟುಮಾಡುತ್ತದೆ.

ರಕ್ತಸ್ರಾವದ ಅಸ್ವಸ್ಥತೆ ಹೊಂದಿರುವ ರೋಗಿಗಳು: ಮೆಂತ್ಯ ನೀರು ರಕ್ತ ತೆಳುಗೊಳಿಸುವ ಔಷಧಿಯಾಗಿ ಕೆಲಸ ಮಾಡುತ್ತದೆ. ಯಾರಾದರೂ ರಕ್ತಸ್ರಾವದ ಕಾಯಿಲೆ ಅಂದರೆ ಹಿಮೋಫಿಲಿಯಾದಂತಹ ಸಮಸ್ಯೆ, ರಕ್ತ ತೆಳುವಾಗಿಸುವ ಔಷಧಿಗಳಾದ ಆಸ್ಪಿರಿನ್ ನಂತಹ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದರೆ, ಮೆಂತ್ಯ ನೀರನ್ನು ಕುಡಿಯುವುದರಿಂದ ರಕ್ತಸ್ರಾವದ ಅಪಾಯ ಹೆಚ್ಚಾಗಬಹುದು. ಅಲ್ಲದೆ ಯಾವುದೇ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದರೆ ಶಸ್ತ್ರಚಿಕಿತ್ಸೆಗೆ ಮುನ್ನ ಮೆಂತ್ಯ ನೀರನ್ನು ಸೇವಿಸಬಾರದು.

ರಾತ್ರಿ ಹೊತ್ತು ಮಾತ್ರ ಇಂತಹ ಆಹಾರಗಳನ್ನು ತಿನ್ನಲೇಬೇಡಿ

ಈಗಿನ ಕಾಲದಲ್ಲಿ ನಮ್ಮಗಳ ಆರೋಗ್ಯ ಬಹಳ ಸೂಕ್ಷ್ಮ. ಒಂದು ತಿಂದರೆ ಹೆಚ್ಚು ಇನ್ನೊಂದು ತಿಂದರೆ ಕಡಿಮೆ ಎನ್ನುವಂತಹ ಅತಿ ಸೂಕ್ಷ್ಮವಾದ ದೈಹಿಕ ಆರೋಗ್ಯ ನಮ್ಮದು. ನಾವು ತಿನ್ನುವ ಹಲವು ಬಗೆಯ ಆಹಾರಗಳಲ್ಲಿ ಕೆಲವೊಂದು ನಮಗೆ ಅತ್ಯಂತ ಪ್ರಿಯವಾಗಿರುತ್ತದೆ. ಹಾಗಾಗಿ ಅವುಗಳನ್ನು ಪದೇ ಪದೇ ತಿನ್ನುತ್ತೇವೆ. ಇನ್ನು ಕೆಲವು ಆಹಾರಗಳು ಉತ್ತಮ ಆರೋಗ್ಯವಾದ ಗುಣಗಳನ್ನು ಹೊಂದಿದ್ದರು ಕೂಡ ನಾವು ಅವುಗಳಿಂದ ದೂರವೇ ಉಳಿಯುತ್ತೇವೆ. ಆದರೆ ಯಾವುದನ್ನು ಇಷ್ಟಪಟ್ಟು ತಿನ್ನುತ್ತೇವೆ ಅಂತಹ ಆಹಾರಗಳಿಂದ ಕೆಲವೊಮ್ಮೆ ನಮ್ಮ ಆರೋಗ್ಯಕ್ಕೆ ಅನಾನುಕೂಲ ಉಂಟಾಗುತ್ತದೆ. ಅದರಲ್ಲೂ ರಾತ್ರಿ ಹೊತ್ತು ತಿನ್ನುವುದರಿಂದ ನಮಗೆ ನೆಮ್ಮದಿಯಾಗಿ ನಿದ್ರಿಸಲು ಕೂಡ ಆಗದೆ ಇರಬಹುದು. ನಮ್ಮ ನಿದ್ರ

● ವರ್ಷವಾದರೂ ನಡೆಯದ ಆರೋಗ್ಯ ತಪಾಸಣೆ, ನಿಯಮಿತವಾಗಿ ಸಿಗದ ಸಲಕರಣೆಗಳು

ಗ್ರಾಮ ಪಂಚಾಯಿತಿಗಳ ಪೌರಕಾರ್ಮಿಕರ ಆರೋಗ್ಯ ಕೇಳೋರಾರು?

• ಉದಯವಾಹಿನಿ ಬೆಳಗಾವಿ

ಇಡೀ ಊರಿನ ಆರೋಗ್ಯವನ್ನು ಕಾಪಾಡುವುದು ಪೌರಕಾರ್ಮಿಕರು. ಆದರೆ, ಅವರ ಆರೋಗ್ಯದ ಬಗ್ಗೆಯೇ ಕಾಳಜಿ ವಹಿಸುವವರು ಇಲ್ಲ.

ಬೆಳಗಾವಿ ಮಹಾನಗರ ಪಾಲಿಕೆಯೂ ಸೇರಿದಂತೆ ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿಗಳ ಪೌರಕಾರ್ಮಿಕರ ಗೋಳು ಕೇಳುವವರು ದಿಕ್ಕಿಲ್ಲ. ನಿಯಮಿತ ಆರೋಗ್ಯ ತಪಾಸಣೆ ಮಾಡಿಸಬೇಕು ಎಂಬ ಕನಿಷ್ಠ ಸೌಜನ್ಯವನ್ನೂ ಸ್ಥಳೀಯ ಸಂಸ್ಥೆಗಳು ತೋರಿಲ್ಲ.

ಒಂದು ವರ್ಷದ ಹಿಂದೆ ಅಶೋಕ ದುಡಗುಂಟಿ ಅವರು ಮಹಾನಗರ ಪಾಲಿಕೆ ಆಯುಕ್ತರಾಗಿದ್ದಾಗ ಆರೋಗ್ಯ ತಪಾಸಣೆ ಮಾಡಿಸಿದ್ದರು. ಇಲ್ಲಿನ ಕೆಎಲ್ಇ ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಲ್ಲಿ ಸಮಗ್ರ ಆರೋಗ್ಯ ಚಿಕಿತ್ಸೆ ಕೊಡಿಸಿದ್ದರು. ವರ್ಷ ಕಳೆದರೂ ಯಾರೂ ಆರೋಗ್ಯದ ಬಗ್ಗೆ ಕಾಳಜಿ ತೋರಿಲ್ಲ' ಎಂದು ಕಾರ್ಮಿಕ ಮಹಿಳೆಯರು ಆರೋಪಿಸುತ್ತಾರೆ.

ನಸುಕಿನ 4ಕ್ಕೇ ಎದ್ದು, ಕಸ, ಮುಸುರೆ, ರೊಚ್ಚು, ಕೊಳೆತ ವಸ್ತುಗಳು, ಮಾಂಸಾಹಾರದ ತ್ಯಾಜ್ಯ, ಸತ್ತ ಪ್ರಾಣಿಗಳ ದೇಹ ಸೇರಿದಂತೆ ಎಲ್ಲವನ್ನೂ ತೆರವು ಮಾಡುವ ಜೀವಗಳಿವು. ಇಡೀ ಬದುಕನ್ನು ಕಸದಲ್ಲೇ ಕಳೆಯುವುದರಿಂದ ಅವರಿಗೆ ರೋಗಗಳು ತಗಲುವ, ಅನಾರೋಗ್ಯ ಉಂಟಾಗುವ ಸಂಭವ ಹೆಚ್ಚಿರುತ್ತದೆ.


ಉದಯವಾಹಿನಿ ಚಿತ್ರ

8 ಲಕ್ಷ ಜನಸಂಖ್ಯೆಗೆ 1300 ಕಾರ್ಮಿಕರು

ಬೃಹತ್ತಾಗಿ ಬೆಳೆದ ಬೆಳಗಾವಿ ನಗರದಲ್ಲಿ 8 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದೆ. ಇವರೆಲ್ಲರ ಗಲೀಜು ಸ್ವಚ್ಛ ಮಾಡಲು ಇರುವುದು ಕೇವಲ 1300 ಪೌರ ಕಾರ್ಮಿಕರು. ನಿಯಮದ ಪ್ರಕಾರ 700 ಜನರಿಗೆ ಒಬ್ಬ ಪೌರಕಾರ್ಮಿಕ ಇರಬೇಕು. ಆದರೆ ನಗರದಲ್ಲಿ ಇದರ ಸಂಖ್ಯೆ ಅಲ್ಲೋಲ ಕಲ್ಲೋಲ ಎನ್ನುವಷ್ಟು ಹೆಚ್ಚಾಗಿದೆ. ತುರ್ತಾಗಿ ಹೆಚ್ಚಿನ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಬೇಕು ಎಂಬ ಕೂಗಿಗೆ ಇನ್ನೂ ಬೆಲೆ ಸಿಕ್ಕಿಲ್ಲ.

ಅದಲ್ಲದೇ, ಪ್ರತಿ ದಿನವೂ ನಿಯಮಿತವಾಗಿ ನಿದ್ದೆ ಮಾಡದ ಕಾರಣ ದೇಹದಲ್ಲಿ ಅಸಮತೋಲನ, ರಕ್ತದೊತ್ತಡ, ಮಧುಮೇಹ ಮುಂತಾದ ಕಾಯಿಲೆಗಳೂ ಅಂಟಿಕೊಳ್ಳಬಹುದು.

ಹೀಗಾಗಿ, ನಿಯಮಿತವಾಗಿ ಸುಸಜ್ಜಿತ ಆಸ್ಪತ್ರೆಗಳಲ್ಲಿ ಅವರಿಗೆ ಆರೋಗ್ಯ ತಪಾಸಣೆ ಮಾಡಿಸಬೇಕು. ಕಾಯಿಲೆ ಬಂದವರಿಗೆ ಸೂಕ್ತ ಚಿಕಿತ್ಸೆ ಕೊಡಿಸಬೇಕು ಎಂಬ ನಿಯಮವಿದೆ. ಮಹಾನಗರ ಪಾಲಿಕೆಯಲ್ಲಿ ಈ ನಿಯಮ ಪಾಲಿಸಿಲ್ಲ ಎನ್ನುವುದು ಅವರ ಗೋಳು.

ಆರೋಗ್ಯ ಪರಿಕರಗಳೂ ವಿಳಂಬ: ವರ್ಷಕ್ಕೆ ಎರಡು ಜತೆ ಬಟ್ಟೆ, ಪುರುಷರಿಗೆ ಷರ್ಟ್- ಪ್ಯಾಂಟ್, ಗೌನು, ಕೈಗವಸು, ಬೂಟು, ಕಾಲುಚೀಲಗಳನ್ನು ನೀಡಬೇಕು. ಇದರೊಂದಿಗೆ ಮಹಿಳೆಯರಿಗೆ ಸೀರೆ ಕೊಡಬೇಕು. ಆದರೆ, ಕೆಲವರಿಗೆ ನೀಡಿದ್ದು ಕೆಲವರಿಗೆ ನೀಡಿಲ್ಲ. ನಗರದ ಹಲವು ಕಡೆ ಕೈಗವಸು (ಹ್ಯಾಂಡ್ ಗೌಸ್) ಕಸ ಎತ್ತುವ ಹಲವು ಕಾರ್ಮಿಕರು ನೋಡಲು ಸಿಗುತ್ತದೆ. ಮತ್ತೆ ಕೆಲವರು ಅಲ್ಲೇ ಬಿದ್ದಿದ್ದ ಪ್ಲಾಸ್ಟಿಕ್ ಚೀಲಗಳನ್ನೇ ಕೈಗೆ ಹಾಕಿಕೊಂಡು ಕಸ ತೆಗೆಯುತ್ತಾರೆ. ಅದೇ ಕೈಯಿಂದ ಅವರು ಊಟ, ಉಪಾಹಾರ, ನೀರು ಸೇವನೆ ಮಾಡುತ್ತಾರೆ. ರೋಗಾಣುಗಳು ನೇರವಾಗಿ ದೇಹ ಸೇರುವ ಸಾಧ್ಯತೆ ಹೆಚ್ಚಾಗಿದೆ.

'ಎಲ್ಲಾ ಕಾರ್ಮಿಕರಿಗೂ ಸೌಕರ್ಯಗಳನ್ನು ನೀಡಲಾಗಿದೆ. ಆದರೆ, ಹಲವರು ಹ್ಯಾಂಡ್‌ಗೌಸ್‌ಗಳನ್ನು ಮನೆಯಲ್ಲೇ ಬಿಟ್ಟು ಬರುತ್ತಾರೆ. ಉಪಯೋಗಿಸಿಕೊಳ್ಳುವುದಿಲ್ಲ. ಈ ಬಗ್ಗೆ ಸಾಕಷ್ಟು ತಿಳಿವಳಿಕೆ ನೀಡಲಾಗಿದೆ' ಎಂಬುದು ಪಾಲಿಕೆ ಅಧಿಕಾರಿಗಳ ಸಮಾಜಯಿಷಿ.

ಮಾಸಿಕ ವೇತನವೂ ವಿಳಂಬ ಕಾಯಂ ಆದ ಪೌರಕಾರ್ಮಿಕರಿಗೆ ಮಾಸಿಕ 18245 ವೇತನ ನೀಡಬೇಕು. ಅದನ್ನು ಕೂಡ ನೇರವಾಗಿ ಅವರ ಖಾತೆಗಳಿಗೆ ತಿಂಗಳ ಮೊದಲ ದಿನವೇ ಪಾವತಿಸಬೇಕು ಎಂಬ ನಿಯಮವಿದೆ. ಆದರೆ ಬೆಳಗಾವಿಯಲ್ಲಿ ಒಂದು ವಾರ ತಡವಾಗಿ ವೇತನ ನೀಡಲಾಗುತ್ತಿದೆ ಎಂಬ ಆರೋಪಗಳು ಪೌರಕಾರ್ಮಿಕರಿಂದ ಕೇಳಿಬಂದಿವೆ.

ಇದರಿಂದ ಅವರು ಮತ್ತೊಬ್ಬರ ಬಳಿ ಬಡ್ಡಿ ಸಾಲ ಪಡೆದು ಜೀವನ ಸಾಗಿಸುವ ಸಂದರ್ಭಗಳೂ ಬಂದಿವೆ. ಅತ್ಯಂತ ತುಳಿತಕ್ಕೆ ಒಳಗಾದ ಶೋಷಣೆಗೆ ಒಳಗಾದ ಈ ಜನರಿಗೆ ತಿಂಗಳ ಮೊದಲ ದಿನವೇ ವೇತನ ನೀಡಬೇಕು ಎಂಬ ನಿಯಮವನ್ನು ಪಾಲಿಕೆ ಅಧಿಕಾರಿಗಳು ಪಾಲಿಸುತ್ತಿಲ್ಲ.

> ಪರಿಶಿಷ್ಟ ಜಾತಿಯ ಜನರು ಮಾತ್ರ ಪೌರಕಾರ್ಮಿಕರ ಕೆಲಸ ಮಾಡಲು ಬರುತ್ತಾರೆ. ಇವರೆಲ್ಲ ತುಳಿತಕ್ಕೊಳಗಾದ ಅನಕ್ಷರಸ್ಥ ಜನ ಎಂಬ ಕಾರಣಕ್ಕೆ ಅಧಿಕಾರಿಗಳು ಜನಪ್ರತಿನಿಧಿಗಳು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಕಾರ್ಮಿಕರು ಆರೋಗ್ಯವಾಗಿದ್ದರೆ ಮಾತ್ರ ನಗರ ಆರೋಗ್ಯವಾಗಿ ಇರುತ್ತದೆ ಎಂಬುದನ್ನು ಅರಿಯಬೇಕು.
> -ವಿಜಯ ಮಧುರ ನೀರಗಟ್ಟಿ
> ಜಿಲ್ಲಾ ಕಾರ್ಯದರ್ಶಿ
> ಸಫಾಯಿ ಕರ್ಮಚಾರಿ
> ಕಾವಲು ಸಮಿತಿ

> ಈಗಷ್ಟೇ ಎರಡನೇ ಕಂತಿನ ಆರೋಗ್ಯ ಸಲಕರಣೆ ನೀಡಿದ್ದಾರೆ. ಇನ್ನೂ ಕೆಲವರಿಗೆ ನೀಡಬೇಕು. ಕಳೆದ ಒಂದು ವರ್ಷದಿಂದ ಆರೋಗ್ಯ ತಪಾಸಣೆ ಮಾಡಿಸಿಲ್ಲ. ಹಣ ಕೊಟ್ಟು ತಪಾಸಣೆ ಮಾಡಿಸಿಕೊಳ್ಳುವ ಶಕ್ತಿಯೂ ನಮಗೆ ಇಲ್ಲ.
> -ಪೌರಕಾರ್ಮಿಕ ಮಹಿಳೆ

ಆರೋಗ್ಯ ಪರಿಕರಗಳೂ ವಿಳಂಬ

ಪ್ರಕೃತಿ ಸಂರಕ್ಷಣೆಗೆ ಸ್ವಚ್ಛ ಭಾರತ ಮಿಷನ್ ಸಹಕಾರಿ

• ಉದಯವಾಹಿನಿ ಹುಮನಾಬಾದ್

ಸ್ಥಳೀಯ ಅಭಿವೃದ್ಧಿ ಮತ್ತು ಪ್ರಕೃತಿಯ ಸಂರಕ್ಷಣೆಗೆ ಸ್ವಚ್ಛ ಭಾರತ ಮಿಷನ್ ಯೋಜನೆ ಸಹಾಕರಿಯಾಗಿದೆ ಎಂದು ಶಾಸಕ ಡಾ. ಸಿದ್ದು ಪಾಟೀಲ್ ಹೇಳಿದರು.

ತಾಲ್ಲೂಕಿನ ಹಳ್ಳಿಖೇಡ (ಬಿ) ಪಟ್ಟಣದ ಹೊರ ವಲಯದ ಬೇನಚಿಂಚೋಳಿ ರಸ್ತೆ ಬದಿಯಲ್ಲಿ ಕೇಂದ್ರ ಸರಕಾರದ ಸ್ವಚ್ಛ ಭಾರತ ಮಿಷನ್ ಯೋಜನೆ ವತಿಯಿಂದ ಶನಿವಾರ ನಡೆದ ಘನ ತ್ಯಾಜ್ಯ ಕಸ ವಿಲೇವಾರಿ ನೂತನ ಘಟಕ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಜನರ ಆರೋಗ್ಯ ಹಾಗೂ ಪರಿಸರ ಸಂರಕ್ಷಣೆಗಾಗಿ ಕೇಂದ್ರ ಸರಕಾರದ 2023-24ನೇ ಸಾಲಿನ 3.14ಕೋಟಿ ಅನುದಾನದಲ್ಲಿ ಹಳ್ಳಿಖೇಡ (ಬಿ) ಪಟ್ಟಣದಲ್ಲಿ ನೂತನ ಕಸ ವಿಲೇವಾರಿ ಘಟಕ ನಿರ್ಮಾಣ ಮಾಡಲಾಗುತ್ತಿದೆ.

ಉದಯವಾಹಿನಿ ಚಿತ್ರ

ಹೀಗಾಗಿ ಗುತ್ತಿಗೆದಾರು ಗುಣಮಟ್ಟದ ಕಾಮಗಾರಿ ಕೈಗೊಳಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಯೂಸುಪ್ ಸೌದಾಗರ್, ಸುಶೀಲ ಮರಪಳ್ಳಿ, ಆರೀಫ್ ಬಾವಗಿ, ಮುರಳಿ ಕೋಷಣಗಿ, ಮುಖ್ಯಾಧಿಕಾರಿ ಸುನಿಲಕುಮಾರ, ಪ್ರಮುಖರಾದ ಅರುಣಕುಮಾರ ಬಾವಗಿ ಸೇರಿ ಪುರಸಭೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ವೈದ್ಯಾಧಿಕಾರಿಗಳಿಂದ ಭ್ರಷ್ಟಾಚಾರ: ರೇವಣ್ಣ

• ಉದಯವಾಹಿನಿ, ಹೊಳೆನರಸೀಪುರ

ತಾಲ್ಲೂಕುಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪ್ರತೀ ವರ್ಷ ಸರ್ಕಾರ 18 ಲಕ್ಷ ಹಣ ಬಿಡುಗಡೆ ಮಾಡುತ್ತದೆ. ಆದರೆ ಇದು ಗ್ರಾಮೀಣ ಜನರಿಗೆ ಬಳಕೆ ಆಗುತ್ತಿಲ್ಲ. ಹೊಳೆನರಸೀಪುರ ತಾಲ್ಲೂಕು ಆಡಳಿತ ವೈದ್ಯಾಧಿಕಾರಿ ಡಾ. ರಾಜೇಶ್ ಹಾಗೂ ಜಿಲ್ಲಾ ಆಡಳಿತ ವೈದ್ಯಾಧಿಕಾರಿ ಡಾ.ಅನಿಲ್ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಈ ಬಗ್ಗೆ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಶಾಸಕ ಎಚ್.ಡಿ ರೇವಣ್ಣ ಆಗ್ರಹಿಸಿದರು. ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ನೂತನ ಐಸಿಯು ಘಟಕ ಹಾಗೂ 2ನೇ ಶಸ್ತ್ರಚಿಕಿತ್ಸಾ ಘಟಕ ಉದ್ಘಾಟಿಸಿ ಮಾತನಾಡಿ, ನಮ್ಮ ಪಡವಲ ಹಿಪ್ಪೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಈ ಹಿಂದೆ ಅತ್ಯತ್ತಮ ಸೇವೆ ಸಿಗುತ್ತಿತ್ತು. ಆದರೆ ಈಗ ಆಸ್ಪತ್ರೆಯು ಮುಚ್ಚುವ ಹಂತ ತಲುಪಿದೆ ಆದರೂ

ಉದಯವಾಹಿನಿ ಚಿತ್ರ

ಯಾರ ವಿರುದ್ಧವೂ ಕ್ರಮ ತೆಗೆದುಕೊಂಡಿಲ್ಲ ಎಂದರು. ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲೂ ಡಿ ಗ್ರೂಪ್ ಮತ್ತು ದಿನಗೂಲಿ ನೌಕರರು ವೈದ್ಯರನ್ನು ನಿಯಂತ್ರಿಸುತ್ತಿದ್ದಾರೆ ಎನ್ನುವ ಆರೋಪ ವ್ಯಾಪಕವಾಗಿದೆ. ನೀವು ವೈದ್ಯರು ತಲೆ ಕೆಡಿಸಿಕೊಳ್ಳಬೇಡಿ. ಸರಿಯಾಗಿ ಕೆಲಸ ಮಾಡದವರನ್ನು ಮುಲಾಜಿಲ್ಲದೆ ತೆಗೆದುಹಾಕಿ' ಎಂದು ಸಲಹೆ ನೀಡಿದರು. 'ತಾಲ್ಲೂಕಿನಲ್ಲಿ 7 ಸಮುದಾಯ ಆಸ್ಪತ್ರೆಗಳ ಕಾಮಗಾರಿ ನಡೆಯುತ್ತಿದೆ. ಈ ಆಸ್ಪತ್ರೆಗಳ ಕಾಮಗಾರಿ ಪೂರ್ಣಗೊಂಡರೆ ಪ್ರತೀ ಕೇಂದ್ರದಲ್ಲಿ 7 ಜನ ವೈದ್ಯರು, 7 ಜನ ದಾದಿಯರು. 5 ಜನ ತಾಂತ್ರಿಕ ಸಿಬ್ಬಂದಿಗೆ ಅವಕಾಶ ಸಿಗಲಿದೆ. ಈ ಸರ್ಕಾರಿ ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆಧುನೀಕರಣಕ್ಕೆ 50 ಕೊಟಿ ಹಣ ಕೊಡಿಸಿದ್ದೇನೆ ಎಂದರು.

> ಶಾಸಕರು ಮುಂದಿನ 20 ವರ್ಷಗಳಿಗೆ ಆಗುವಂತಹ 5 ಅಂತಸ್ತಿನ ಕಟ್ಟಡವನ್ನು, ಆಧುನಿಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಬಂಜೆತನ ನಿವಾರಣಾ ಕೇಂದ್ರ ಹಾಗೂ ಎಂ.ಆರ್.ಐ. ಸ್ಕ್ಯಾನಿಂಗ್ ಮತ್ತು ಹೃದ್ರೋಗ ಚಿಕಿತ್ಸಾ ಸೌಲಭ್ಯ ದೊರಕುವಂತಾದರೆ ಇದೊಂದು ಪರಿಪೂರ್ಣ ಆಸ್ಪತ್ರೆ ಆಗುತ್ತದೆ -ಡಾ.ಧನ್‌ಶೇಖರ್
> ಆಸ್ಪತ್ರೆಯ ವೈದ್ಯಾಧಿಕಾರಿ

ಕಾಂಗ್ರೇಸ್ ಪಕ್ಷವು ಪಂಚ ಗ್ಯಾರಂಟಿ ಮೂಲಕ ವರ್ಷಕ್ಕೆ 80ಸಾವಿರ ಕೋಟಿ ರೂ. ಬಡವರ ಮನೆಗಳಿಗೆ ಮುಟ್ಟಿಸುತ್ತಿದೆ: ಸಚಿವ ಡಾ.ಶರಣಪ್ರಕಾಶ ಪಾಟೀಲ

• ಉದಯವಾಹಿನಿ, ಚಿಂಚೋಳಿ

ಕಾಂಗ್ರೇಸ್ ಪಕ್ಷದವು ಅಧಿಕಾರಕ್ಕೆ ಬಂದಮೇಲೆ ಪಂಚ ಗ್ಯಾರಂಟಿ ಮೂಲಕ ವರ್ಷಕ್ಕೆ 80ಸಾವಿರ ಕೋಟಿ ರೂ.ಬಡವರ ಮನೆಗಳಿಗೆ ಮುಟ್ಟಿಸುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದಲ್ಲಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಯೋಜನಾ ವಿಭಾಗದಿಂದ 2024-25ನೇ ಸಾಲಿನ ಕಲ್ಯಾಣ ಪಥ ಯೋಜನೆ ಅಡಿಯಲ್ಲಿ ರಾಜ್ಯ ಹೆದ್ದಾರಿದಿಂದ 07.01ಕೋಟಿ ರೂ. ಗಳಲ್ಲಿ ಗಡಿಕೇಶ್ವಾರವರೆಗೆ ರಸ್ತೆ ಸುಧಾರಣೆ ಕಾಮಗಾರಿ ಹಾಗೂ 2024-25ನೇ ಸಾಲಿನ ಕಲ್ಯಾಣ ಪಥ ಯೋಜನೆಯಲ್ಲಿ ಗಡಿಕೇಶ್ವಾರದಿಂದ ಕೊರಡಂಪಳ್ಳಿ ಮಾರ್ಗವಾಗಿ ಕೆರೋಳ್ಳಿವರೆಗೆ 11.57ಕೋಟಿ ರೂ. ಗಳಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ಒಟ್ಟಾರೆ 18ಕೋಟಿ ರೂಪಾಯಿಗಳ ಅಡಿಗಲ್ಲು ನೆರವೇರಿಸಿ ಮಾತನಾಡಿದ ಅವರು, ಸಮೃದ್ಧ ಭಾರತ ಕಟ್ಟಲು ಪ್ರಮಾಣಿಕವಾಗಿ ಕಾಂಗ್ರೇಸ್ ಪಕ್ಷ ಶ್ರಮಿಸುತ್ತಿದೆ. ಸೇಡಂ ವಿಧಾನಸಭಾ ಮತಕ್ಷೇತ್ರವು ಸರ್ವಾಂಗಿಣ ಅಭಿವೃದ್ಧಿಯೇ ನನ್ನ


ಉದಯವಾಹಿನಿ ಚಿತ್ರ

ಗುರಿಯಾಗಿದೆ, ಈಗಾಗಲೇ ಗಡಿಕೇಶ್ವಾರ ಗ್ರಾಮದಲ್ಲಿ ಸಮುದಾಯ ಆರೋಗ್ಯ ಕೇಂದ್ರಕ್ಕೆ 75ಲಕ್ಷ ರೂ.ಸೇರಿದಂತೆ ಉರ್ದು ಶಾಲೆಗೆ 15ಲಕ್ಷ, ದೇವಾಸ್ಥಾನಕ್ಕೆ 10ಲಕ್ಷ, ಎಸ್ಸಿ ಓಣಿಯಲ್ಲಿ ಸಿಸಿರಸ್ತೆಗೆ 35ಲಕ್ಷ ರೂ.ಮತ್ತೊಂದು ದೇವಾಸ್ಥಾನಕ್ಕೆ 5ಲಕ್ಷ ರೂ.ಸರ್ಕಾರಿ ಶಾಲೆಗೆ 15ಲಕ್ಷ ರೂ.ಹೀಗೆ ಕೋಟಿಗಟ್ಟಲೆ ಅನುದಾನ ಬಿಡುಗಡೆ ಮಾಡಿ ಅಭಿವೃದ್ಧಿ ಮಾಡಲಾಗಿದ್ದು ಪ್ರತಿಯೊಂದು ಗ್ರಾಮಗಳಲ್ಲಿ 2.65ಕೋಟಿ ರೂ.ಗಳಲ್ಲಿ ಸಿಸಿರಸ್ತೆಗಳು ಮಾಡಲಾಗಿದೆ.

371ಜೆ ಮಲ್ಲಿಕಾರ್ಜುನ ಖರ್ಗೆಯವರ ಪರಿಶ್ರಮದಿಂದ ಜಾರಿಗೆ ಬಂದ ನಂತರ ಈ ಭಾಗದ ಪ್ರತಿಯೊಬ್ಬರಿಗೆ ಅನುಕೂಲವಾಗಿದೆ, ಸೇಡಂ ಸುಲೇಪೇಟ ರಸ್ತೆಯು 10ಕೋಟಿ ರೂ.ಕೆಲಸ ನಡೆಯುತ್ತಿದೆ, ಇನ್ನು 05ಕೋಟಿ ರೂ.ಬಿಡುಗಡೆ ಮಾಡಲಾಗಿದೆ, ಕಲಬುರ್ಗಿ ಮೆಡಿಕಲ್ ಹಬ್ ನಿರ್ಮಾಣ, ಕಲಬುರ್ಗಿ ಜಿಲ್ಲೆಯಲ್ಲಿ ತಾಯಿ ಮಗು ಆಸ್ಪತ್ರೆ 92ಕೋಟಿ ರೂ.ಗಳಲ್ಲಿ ಮಾಡಲಾಗುತ್ತಿದೆ, ನಿಮಾನ್ಸ್ ಆಸ್ಪತ್ರೆಯು 100ಕೋಟಿ ರೂ.ಗಳಲ್ಲಿ ಮಾಡಲಾ ಗುತ್ತಿದೆ ಹೀಗೆ ಹತ್ತಾರು ಯೋಜನೆಗಳು ಮಾಡಿದ್ದೇವೆ ಯಾರು ಕೂಡ ಬೇರೆ ಜಿಲ್ಲೆ ರಾಜ್ಯಗಳಿಗೆ ಹೋಗುವಂತಿಲ್ಲಾ ಎಲ್ಲಾ ಚಿಕಿತ್ಸೆಗಳು ಉಚಿತವಾಗಿ ನೀಡಲಾಗುತ್ತಿದೆ ಎಂದರು.

ಕೋಟಿಗಟ್ಟಲೆ ಅನುದಾನ ಬಿಡುಗಡೆ

ವೀರೇಶ ರೇಮಣಿ ಸ್ವಾಗತಿಸಿದರು, ಶಿವಕುಮಾರ ನಿರೂಪಿಸಿದರು, ಜೀಶಾನ್ ಪಟ್ಟೇದಾರ ವಂದಿಸಿದರು.

ಈ ಸಂದರ್ಭದಲ್ಲಿ ಬಸವರಾಜ ಪಾಟೀಲ ಊಡಗಿ, ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್, ಎಇಇ ಉದಯಕುಮಾರ ಹೊದೆ, ಗುತ್ತೇದಾರರ ಮಸ್ತಾನ ಅಲಿ ಪಟ್ಟೇದಾರ, ಶಿವಶರಣರೆಡ್ಡಿ ಪಾಟೀಲ್, ಅಶೋಕರೆಡ್ಡಿ, ನಾಗೇಶ್ವರ ಪಾಟೀಲ, ಅಷ್ಫಾಕ್ ಸಾಬ, ಲಿಂಗಶೇಟ್ಟಿ ತಟ್ಟೇಪಳ್ಳಿ, ಜಗದೇವಯ್ಯ, ಜಮೀರಸಾಬ, ರವಿಸ್ವಾಮಿ, ಗ್ರಾಪಂ ಅಧ್ಯಕ್ಷ ರೇಣುಕಾ ಪ್ರಕಾಶ ರಂಗನೂರ, ಸತೀಶ ಪೋಚಾಲಿ, ಶಾಂತಕುಮಾರ, ಶಿವನಂದ ರೇಮಣಿ, ಆಸೀಫ್ ರಾಯಕೋಡ, ವಿಶ್ವ ಬೀರನಳ್ಳಿ, ಅನೇಕರಿದ್ದರು.

ಭಾರತವನ್ನು ಕೆಣಕಿದರೇ ಉಳಿಗಾಲವಿಲ್ಲ

• ಉದಯವಾಹಿನಿ, ಜೇವರ್ಗಿ

ಧರ್ಮನಿಷ್ಠ ಭಾರತ ದೇಶಕ್ಕೆ ಕೆಣಕಿದರೇ ಯಾರಿಗೂ ಉಳಿಗಾಲವಿಲ್ಲ. ಆದ್ದರಿಂದಲೇ ವಿಶ್ವಮಟ್ಟದಲ್ಲಿ ಭಾರತ ಸಾಕಷ್ಟು ಹೆಸರು ಮಾಡಿದೆ ಎಂದು ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ದರಾಮ ಪಂಡಿತರಾಧ್ಯ ಶಿವಾಚಾರ್ಯರು ನುಡಿದರು.

ತಾಲ್ಲೂಕಿನ ಕೋಳಕೂರ ಗ್ರಾಮದ ಪವಾಡ ಪುರುಷ ಸಿದ್ದಬಸವೇಶ್ವರರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಧರ್ಮಸಭೆ, ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಧರ್ಮ ಇದ್ದ ಕಡೆ ಜಯ, ಸುಖಃ ಇರುತ್ತದೆ. ವಿಶ್ವದಲ್ಲಿ ವೀರಶೈವ ಧರ್ಮ ಸತ್ಯ ಹಾಗೂ ಶ್ರೇಷ್ಠ ಧರ್ಮವಾಗಿದೆ. ವೀರಶೈವ ಧರ್ಮ ಪ್ರಕೃತಿ ಧರ್ಮವಾಗಿದೆ.

ಈ ಧರ್ಮಕ್ಕೆ ಜಾತಿಯ ಸಂಕೋಲೆ ಇಲ್ಲ. ದೇವನೊಬ್ಬ ನಾಮ ಹಲವು ಎಂಬ ಗಾಧೆ ಮಾತಿನಂತೆ ಒಬ್ಬ ಭಗವಂತನಿಗೆ ಸಹಸ್ರಾರು ಹೆಸರುಗಳಿವೆ ಎಂಬ ಸತ್ಯವನ್ನು ಅರಿತು ಬಾಳಿದಾಗ ಎಲ್ಲೆಡೆ ಸಾಮರಸ್ಯ ಸಾಹಾರ್ದತೆ ಬೆಳೆದು ಬರಲು ಸಾಧ್ಯವಾಗುತ್ತದೆ. ಮನುಷ್ಯನ ಬುದ್ಧಿಶಕ್ತಿ ಬೆಳೆದಂತೆ ಭಾವನೆಗಳು ಬೆಳೆಯಲಾರದ ಕಾರಣ

ಉದಯವಾಹಿನಿ ಚಿತ್ರ

> ದೇವಸ್ಥಾನದ ಅಭಿವೃದ್ಧಿಗೆ 45 ಲಕ್ಷ ರೂ.ಅನುದಾನ ಬಿಡುಗಡೆ ಮಾಡಲಾಗಿದ್ದು, ಇನ್ನೂ 55 ಲಕ್ಷ ರೂ. ಬಿಡುಗಡೆಗೆ ಪ್ರಯತ್ನಿಸಲಾಗುವುದು
> -ಶಾಸಕ ಡಾ.ಅಜಯಸಿಂಗ್

ಇಂದಿನ ಎಲ್ಲಾ ಅವಾಂತರಗಳಿಗೆ ಕಾರಣ. ದೇವರು, ಧರ್ಮ, ಜಾತಿ, ಪ್ರಾಂತೀಯ ಹೆಸರಿನಲ್ಲಿ ಅನೇಕ ದುರಂತಗಳು ನಡೆಯುತ್ತಿರುವುದು ನೋವಿನ ಸಂಗತಿ ಎಂದು ಹೇಳಿದರು. ಕೋಳಕೂರ ಗ್ರಾಮದ ಸಿದ್ದಬಸವೇಶ್ವರರ ದೇವಸ್ಥಾನದಲ್ಲಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಸುವರ್ಣಾಕ್ಷರದಲ್ಲಿ ಬರೆದಿಡುವಂತಹ ಕಾರ್ಯಕ್ರಮವಾಗಿದ್ದು, ಈ ಭಾಗದ ಜನ ಇದರ ಸ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	03:00 ರಿಂದ 04:30
ಗುಳಿಕ ಕಾಲ	ಮಧ್ಯಾಹ್ನ	12:00 ರಿಂದ 01:30
ಯಮಗಂಡ ಕಾಲ	ಬೆಳಿಗ್ಗೆ	09:00 ರಿಂದ 10:30

ಮೇಷ ಸಣ್ಣ ಮಕ್ಕಳು ನಿಮ್ಮನ್ನು ವ್ಯಸ್ತವಾಗಿರಿಸುತ್ತಾರೆ ಮತ್ತು ನಿಮಗೆ ಸಂತೋಷ ತರುತ್ತಾರೆ. ಇಂದು ನೀವು ಎಂತಹ ಒಳ್ಳೆಯ ಕೆಲಸ ಮಾಡಿದ್ದೀರೆಂದು ತೋರಿಸಲು ನಿಮ್ಮ ಪ್ರೀತಿ ಅರಳುತ್ತದೆ.

ವೃಷಭ ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

ಮಿಥುನ ವಿಜಯೋತ್ಸವವು ನಿಮಗೆ ಪ್ರಚಂಡ ಸಂತೋಷವನ್ನು ನೀಡುತ್ತದೆ. ನಿಮ್ಮ ಸಂತೋಷವನ್ನು ಅನುಭವಿಸಲು ನೀವಿದನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ.

ಕರ್ಕಾಟಕ ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ನಿಮ್ಮ ಬಳಿ ಹೆಚ್ಚು ಹಣವಿಲ್ಲ ಎಂದು ಯೋಚಿಸಿದರೆ, ಇಂದು ಮನೆಯ ದೊಡ್ಡವರಿಂದ ಹಣವನ್ನು ಹಣವನ್ನು ಸಂಗ್ರಹಿಸುವ ಸಲಹೆ ತೆಗೆದುಕೊಳ್ಳಿ .

ಸಿಂಹ ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ಜೀವನ ಸಂಗಾತಿಯೊಂದಿಗೆ ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಜಗಳವಾಗುವ ಸಾಧ್ಯತೆ ಇದೆ.

ಕನ್ಯಾ ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಅದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ.

ತುಲಾ ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ.

ವೃಶ್ಚಿಕ ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು.ಅವರಿಗೆ ಹಣವನ್ನು ಹಿಂದಿರುಗಿಸಿ ನೀವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಬಹುದು.

ಧನಸ್ಸು ವಿಶೇಷವಾಗಿ ತಿರುವುಗಳಲ್ಲಿ ವಾಹನ ಚಾಲನೆ ಮಾಡುವಾಗ ಎಚ್ಚರಿಕೆಯಿಂದಿರಿ. ಬೇರೆಯವರ ಉದಾಸೀನತೆ ನಿಮಗೆ ಸಮಸ್ಯೆಗಳನ್ನು ಉಂಟುಮಾಡಬಹುದು. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ.

ಮಕರ ನಿಮ್ಮ ಮನಸ್ಸು ಇತ್ತೀಚಿನ ಘಟನೆಗಳಿಂದ ತೊಂದರೆಗೊಳಗಾಗುತ್ತದೆ. ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗೆ ಪ್ರಯೋಜನಕಾರಿ ಎಂದು ಸಾಬೀತಾಗುತ್ತದೆ.

ಕುಂಭ ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ– ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ.

ಮೀನ ನಿಮ್ಮ ಸುತ್ತಲಿನ ಸುಮಾರು ತುಂಬ ಬೇಡಿಕೆಯಿಡುತ್ತಾರೆಂದು ನಿಮಗನಿಸುತ್ತದೆ–ನಿಮಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ಮಾಡಲು ಒಪ್ಪಿಕೊಳ್ಳಬೇಡಿ. ಇತರರನ್ನು ಸಂತೋಷಪಡಿಸಲು ನಿಮ್ಮ ಮೇಲೆ ಒತ್ತಡ ಹಾಕಬೇಡಿ.

● ಅವಳಿ ನಗರದ ಕೆಲವು ವಾರ್ಡ್‌ಗಳಲ್ಲಿ ಈಗಲೂ 15ರಿಂದ 20 ದಿನಗಳಿಗೊಮ್ಮೆ ನೀರು ಪೂರೈಕೆ

ಜಲ ಸರಬರಾಜು ಪೂರೈಕೆ ಜಾಲ ಅಧ್ವಾನ: ನೀರಿಗೆ ತತ್ವಾರ

ನೀರು ಪೂರೈಕೆ ಜಾಲ ಅದ್ವಾನ

• ಉದಯವಾಹಿನಿ ಗದಗ

ಅವಳಿ ನಗರಕ್ಕೆ ಪೂರೈಕೆಯಾಗುವ ಹಮ್ಮಿಗಿ ಬ್ಯಾರೇಜ್‌ನಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿದ್ದರೂ ಗದಗ ಬೆಟಗೇರಿ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಮಾತ್ರ ತಪ್ಪಿಲ್ಲ. ನೀರು ಪೂರೈಸುವ ಪೈಪ್‌ಲೈನ್ ವ್ಯವಸ್ಥೆ ಹದಗೆಟ್ಟಿರುವುದು ಹಾಗೂ ಹಮ್ಮಿಗಿ, ಪಾಪನಾಶಿ ಮತ್ತು ಡಂಬಳ ಭಾಗದಲ್ಲಿ ಅನಿಯಮಿತ ಲೋಡ್‌ಶೆಡ್ಡಿಂಗ್ ಕಾರಣದಿಂದಾಗಿ ನೀರು ಪೂರೈಕೆ ಜಾಲ ಅಫ್ವಾನಗೊಂಡಿದೆ.

ಅವಳಿ ನಗರದ ಜನರು ಕಳೆದ 20 ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಸಮಸ್ಯೆ ಬಗೆಹರಿಸಲು ಈವರೆಗೆ ನೂರಾರು ಕೋಟಿ ಹಣ ಖರ್ಚಾಗಿದೆ. ಆದರೆ, ಸಮಸ್ಯೆ ಮಾತ್ರ ಬಗೆಹರಿದಿಲ್ಲ. ಅವಳಿ ನಗರದ ಕೆಲವು ವಾರ್ಡ್‌ಗಳಲ್ಲಿ ಈಗಲೂ 15ರಿಂದ 20 ದಿನಗಳಿಗೊಮ್ಮೆ ನೀರು ಬರುತ್ತದೆ. ಇನ್ನು ಕೆಲವು ವಾರ್ಡ್‌ಗಳಿಗೆ ಎಂಟು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದೆ. ಸದ್ಯ ನೀರಿನ ಕೊರತೆ ಇರುವ ವಾರ್ಡ್‌ಗಳಿಗೆ ನಗರಸಭೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ.

ನದಿ ನೀರು ಪೂರೈಕೆಯಲ್ಲಿ ಆಗುವ ವ್ಯತ್ಯಯ ಸರಿದೂಗಿಸಲು ನಗರದ 35 ವಾರ್ಡ್‌ಗಳಲ್ಲಿ ಕೂಡ ನಗರಸಭೆ ವತಿಯಿಂದ ಕೊಳವೆಬಾವಿಗಳನ್ನು ಕೊರೆಯಿಸಲಾಗಿದೆ. ಆದರೆ, ಬಹುತೇಕ ವಾರ್ಡ್‌ಗಳಲ್ಲಿ ಕೊಳವೆಬಾವಿಗಳು ದುರಸ್ತಿಗೆ ಬಂದಿವೆ. ಹೊಸದಾಗಿ ಕೊಳವೆಬಾವಿ ಕೊರೆಯಿಸಲು ಪ್ರತಿವಾರ್ಡ್‌ಗೆ 5 ಲಕ್ಷ ಬಿಡುಗಡೆ ಆಗಿದ್ದು, ಹೊಸ ಬೋರ್‌ವೆಲ್‌ಗಳನ್ನು ಕೊರೆಯಿಸಲು ಸಿದ್ಧತೆ ನಡೆದಿದೆ.

'ಅವಳಿ ನಗರಕ್ಕೆ ಪ್ರತಿದಿನ 28 ಎಂಎಲ್‌ಡಿ ನೀರು ಬೇಕಿದೆ. ಗದಗ ಬೆಟಗೇರಿ ನಗರಕ್ಕೆ ಎಷ್ಟು ಬೇಕೋ ಅಷ್ಟು ನೀರು ಲಭ್ಯ ಇದೆ. ಆದರೆ, ಅಸಮರ್ಪಕವಾಗಿರುವ ಪೈಪ್‌ಲೈನ್ ವ್ಯವಸ್ಥೆ ಮತ್ತು ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಯದ ಕಾರಣದಿಂದಾಗಿ ನೀರು ಹರಿಯುವ ವೇಗಕ್ಕೆ ಪದೆಪದೇ ತಡೆ ಬೀಳುತ್ತಿದೆ. ಹಮ್ಮಿಗಿ, ಪಾಪನಾಶಿ, ಡಂಬಳ ಈ ಯಾವುದೇ ಜಾಗದಲ್ಲಿ ಐದು ನಿಮಿಷ ಕರೆಂಟ್ ಹೋದರೂ ಪೈಪ್ ಮೂಲಕ ಹರಿಯುವ ನೀರು ಮೊದಲಿನ ವೇಗ ಪಡೆಯಲು ಕನಿಷ್ಠ ಎರಡು ಮೂರು ಗಂಟೆಗಳು ಬೇಕು. ಹೀಗಾಗಿ ನಿರಂತರ ನೀರು ಪೂರೈಕೆ ಸಾಧ್ಯವಾಗುತ್ತಿಲ್ಲ' ಎನ್ನುತ್ತಾರೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತ ರಮೇಶ್ ಪವಾರ.

ಉದಯವಾಹಿನಿ ಚಿತ್ರ

> ಜಿಲ್ಲಾ ಉಸ್ತುವಾರಿ ಸಚಿವರು ಅವಳಿ ನಗರಕ್ಕೆ ಪ್ರತಿ ನಾಲ್ಕು ದಿನಕ್ಕೆ ಒಮ್ಮೆಯಾದರೂ ನೀರು ಪೂರೈಸಬೇಕು ಎಂಬ ಗುರಿ ಕೊಟ್ಟಿದ್ದರು. ಆದರೆ ವಿದ್ಯುತ್ ಸಮಸ್ಯೆ, ಪೈಪ್ ಲೈನ್ ದುರಸ್ತಿ ಮೋಟಾರ್ ಸಮಸ್ಯೆ ಎದುರಾಗುತ್ತಿರುವುದರಿಂದ ಈ ಗುರಿ ಸಾಧಿಸಲು ಸಾಧ್ಯವಾಗಿಲ್ಲ
> –ರಮೇಶ್ ಪವಾರ, ಪೌರಾಯುಕ್ತ

ನೀರು ಪೂರೈಕೆಗೆ ಅಡ್ಡಿಯಾಗುತ್ತಿರುವ ವಿದ್ಯುತ್ ಸಮಸ್ಯೆ ಬಗೆಹರಿಸಲು ಶಾಶ್ವತ ಪರಿಹಾರ ಕ್ರಮ ರೂಪಿಸಬೇಕಿದೆ. ಹಮ್ಮಿಗಿಯಿಂದ ಗದಗ ನಗರಕ್ಕೆ ನೀರು ಪೂರೈಕೆಯಾಗುವ ಹಮ್ಮಿಗಿ, ಡಂಬಳ ಮತ್ತು ಪಾಪನಾಶಿ ಸ್ಥಳಗಳನ್ನು ಜೋಡಿಸಿ, ಫೀಡರ್ ಲೈನ್ ಮಾಡಬೇಕಿದೆ. ಗ್ರಿಡ್‌ನಿಂದಲೇ ನೇರ ಸಂಪರ್ಕ ಕಲ್ಪಿಸಿದರೆ ಕುಡಿಯುವ ನೀರು ಸರಬರಾಜು ಮಾಡಲು ಬೇಕಿರುವ ವಿದ್ಯುತ್ ಸಮಸ್ಯೆ ಬಗೆಹರಿಯುತ್ತದೆ' ಎನ್ನುತ್ತಾರೆ ಅವರು.

'ಇದರ ಜತೆಗೆ 24/7 ಕುಡಿಯುವ ನೀರು ಪೂರೈಕೆಯ ಪೈಪ್‌ಲೈನ್ ಸರಿಯಾಗಿ ಜೋಡಣೆ ಆಗಬೇಕಿದೆ. ಪ್ರತಿ ಏರಿಯಾಗೆ ವಾಲ್‌ಗಳನ್ನು ಅಳವಡಿಸಬೇಕಿದೆ.

ಹೊಸ ಪೈಪ್‌ಲೈನ್ ಮಾಡಿಸಲು ಪ್ರಸ್ತಾವ ಸಲ್ಲಿಸಲು ಸಿದ್ಧತೆ ನಡೆಸಲಾಗಿದೆ. ಈ ಎರಡು ಸಮಸ್ಯೆಗಳು ಬಗೆಹರಿದರೆ ಪ್ರತಿದಿನ ನೀರು ಪೂರೈಸಲು ಯಾವುದೇ ಅಡ್ಡಿ ಇಲ್ಲ' ಎನ್ನುತ್ತಾರೆ ಅವರು.ಲಕ್ಷ್ಮಿ ಗಂಗಿಮಡಿ

> ಸ್ಲಂ ಬೋರ್ಡ್ ಗಂಗಿಮಡಿ ಹಮಾಲರ ಪ್ಲಾಟ್ ಸೇರಿದಂತೆ ಹಲವು ಕಡೆಗಳಲ್ಲಿ ಹತ್ತು ದಿನಗಳಾದರೂ ನೀರು ಬರುತ್ತಿಲ್ಲ. ಗದಗ ಬೆಟಗೇರಿ ಅವಳಿ ನಗರದ ಜನರಿಗೆ ನಿರಂತರವಾಗಿ ಕುಡಿಯುವ ನೀರು ಪೂರೈಸಲು ಅಧಿಕಾರಿಗಳು ಕ್ರಮವಹಿಸಬೇಕು
> –ಲಕ್ಷ್ಮಿ ಗಂಗಿಮಡಿ

ಶೌಚಾಲಯಕ್ಕಾಗಿ ಮಹಿಳೆಯರಿಂದ ಗ್ರಾ.ಪಂ ಕಚೇರಿಗೆ ಮುತ್ತಿಗೆ

• ಉದಯವಾಹಿನಿ ಚಿತ್ತಾಪುರ

ತಾಲ್ಲೂಕಿನ ಅಲ್ಲೂರ (ಬಿ) ಗ್ರಾಮದಲ್ಲಿರುವ ಸಾರ್ವಜನಿಕ ಶೌಚಾಲಯ ಸ್ಥಳದಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದು ಇದನ್ನು ಬೇರೆಯವರು ಅನಧಿಕೃತವಾಗಿ ಕಬ್ಜೆ ಮಾಡಿದ್ದು ಕಬ್ಜೆ ಮಾಡಿದದನ್ನು ಬಿಡಿಸಿ ಸದರಿ ಶೌಚಾಲಯ ಸ್ಥಳವನ್ನು ಸ್ವಚ್ಛಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿ ಮಹಿಳೆಯರು ಗ್ರಾಮ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಅಲ್ಲೂರ (ಬಿ) ಗ್ರಾಮದಲ್ಲಿ ಸಾರ್ವಜನಿಕ ಮಹಿಳಾ ಶೌಚಾಲಯ ನಿರ್ಮಾಣ ಮಾಡಿರುತ್ತಾರೆ.

ಆದರೆ ಸದರಿ ಶೌಚಾಲಯ ಜಾಗವನ್ನು ಬೇರೆಯವರು ಅನಧಿಕೃತವಾಗಿ ಕಬ್ಜೆ ಮಾಡಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆ. ಈ ಶೌಚಾಲಯ ಸಾರ್ವಜನಿಕರಿಗೆ ಉಪಯೋಗವಾಗಲು ನಿರ್ಮಾಣ ಮಾಡಿದ್ದು ಅದನ್ನು ಬಿಟ್ಟು ಬೇರೆಯವರು ಅನಧಿಕೃತವಾಗಿ ನಿರ್ಮಾಣ ಮಾಡಿದ್ದು ಅದನ್ನು ಬಿಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿ

ಉದಯವಾಹಿನಿ ಚಿತ್ರ

ಕೊಡಬೇಕೆಂದು ಗ್ರಾಪಂ ಅಧ್ಯಕ್ಷರಿಗೆ ಮತ್ತು ಪಿ.ಡಿ.ಓ ಅವರಿಗೆ ಈಗಾಗಲೇ ಮನವಿ ಪತ್ರವನ್ನು ಸಲ್ಲಿಸಲಾಗಿದೆ. ಆದರೆ ಇನ್ನುವರೆಗೆ ಪಿ.ಡಿ.ಓ ಅವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಾರ್ವಜನಿಕ ಶೌಚಾಲಯವನ್ನು ಅನಧಿಕೃತವಾಗಿ ಕಬ್ಜೆ ಮಾಡಿರುವುದನ್ನು ಬಿಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಒಂದು ವೇಳೆ ಇದರ ಕುರಿತು ಕ್ರಮ ಕೈಗೊಳ್ಳದೆ ಇದ್ದ ಪಕ್ಷದಲ್ಲಿ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಗ್ರಾ.ಪಂ.ಗೆ ಬೀಗಮುದ್ರೆ ಹಾಕಿ ಪ್ರತಿಭಟನೆ ಮಾಡಲಾಗುವುದೆಂದು ಎಚ್ಚರಿಕೆ ನೀಡಿದರು.

ವಿಶ್ವದ ಆರ್ಥಿಕ ಸಾಮರ್ಥ್ಯ ಹೆಚ್ಚಿಸಿದವರು ಕಾರ್ಮಿಕರು: ಆಜೂರ

• ಉದಯವಾಹಿನಿ ವಿಜಯಪುರ

ವಿಶ್ವದ ಕಾರ್ಮಿಕರು ಮಳೆ, ಬಿಸಿಲು ಹಾಗೂ ಚಳಿ ಎನ್ನದೆ ಹಗಲಿರಳು ದುಡಿಯುತ್ತಿರುವದರಿಂದ ವಿಶ್ವದ ಆರ್ಥಿಕ ಸಾಮರ್ಥ್ಯ ಹೆಚ್ಚಿಸಿದ್ದಾರೆ. ವಿಶ್ವದ ಜನಸಂಖ್ಯೆ ಅಪಾರವಾಗಿ ಬೆಳೆಯುತ್ತಿದ್ದರೂ ಕೌಶಲ್ಯಯುತ ಕಾರ್ಮಿಕರ ಕೊರತೆ ವಿಶ್ವಕ್ಕೆ ಕಾಡುತ್ತಿದೆ ಎಂದು ವಿಶ್ರಾಂತ ಪ್ರಾಚಾರ್ಯ ಬಿ.ಎಮ್. ಆಜೂರ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲಾ, ತಾಲ್ಲೂಕ ಹಾಗೂ ನಗರ ಘಟಕ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಜರುಗಿದ ಅಂತರರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಕುರಿತು ಚಿಂತನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಮಿಕರ ಹಕ್ಕು ಮತ್ತು ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಸರ್ಕಾರ ಕಾರ್ಮಿಕರ ಕಲ್ಯಾಣ ಇಲಾಖೆಯನ್ನು ಸ್ಥಾಪಿಸಿದೆ. ಕಾರ್ಮಿಕರಿಗೆ ಅನ್ಯಾಯವಾದರೆ

ಉದಯವಾಹಿನಿ ಚಿತ್ರ

> ಶ್ರಮ ವಹಿಸಿ ದುಡಿಯುವವರೆ ಕಾರ್ಮಿಕರು. ಕಾರ್ಮಿಕರ ಕೊಡುಗೆ ಅಪಾರ. ಬೇಧವಿಲ್ಲದ ಕಾರ್ಮಿಕರ ಶ್ರೇಷ್ಠತೆ ಕುರಿತು ಅನೇಕ ವಚನಗಳನ್ನು ಬರೆದು ಕಾಯಕ ಮಾಡುವ ಕಾರ್ಮಿಕರಿಗೆ ಅತ್ಯಂತ ಗೌರವ ನೀಡಿದವರು ಬಸವಾದಿ ಶರಣರು –ಎಂ.ಬಿ. ಕಟ್ಟಿಮನಿ
> ಶರಣ ಚಿಂತಕ

ಕಾನೂನು ಹಾಗೂ ನ್ಯಾಯಾಲಯ ಸ್ಥಾಪನೆ ಮಾಡಿದೆ. ಹನ್ನೆರಡನೆಯ ಶತಮಾನದ ಶರಣರು ಕಾಯಕ ಸಿದ್ಧಾಂತ ಪ್ರತಿಪಾದಿಸಿದ್ದಾರೆ ಎಂದರು

ಕಾಯಕ ತತ್ವ ಪರಿಪಾಲಿಸಲು ಶರಣೆಯರ ಸಂದೇಶ ಕುರಿತು ಪ್ರವಚನಗಾರ್ತಿ ಸುಖದೇವಿ ಅಲಬಾಳಮಠ ಉಪನ್ಯಾಸ ನೀಡಿ, ಅಕ್ಕಮಹಾದೇವಿ, ಸತ್ಯಕ್ಕೆ, ನಿಲಾಂಬಿಕೆ, ಆಯ್ದಕ್ಕಿ ಲಕ್ಕಮ್ಮ, ಕಲ್ಯಾಣಮ್ಮ ಮುಂತಾದ ಶರಣೆಯರು ದುಡಿದು ತಿನ್ನುವ ವರ್ಗವನ್ನು ಕೊಂಡಾಡಿದ್ದಾರೆ ಎಂದರು.

ಹೊಲದಲ್ಲಿ ಜಿಂಕೆ ಸಾವು: ಅರಣ್ಯ ಅಧಿಕಾರಗಳಿಗೆ ಹಸ್ತಾಂತರ

• ಉದಯವಾಹಿನಿ ಕಮಲನಗರ

ತಾಲ್ಲೂಕಿನ ರಾಂಪುರ ಶಿವಾರಿನಲ್ಲಿ ಇರುವ ಶಿವರಾಜ ರಾಂಪುರೆ ಅವರ ಹೊಲದಲ್ಲಿ ಶನಿವಾರ ಮುಂಜಾನೆ ಜಿಂಕೆ ಒಂದು ಸತ್ತು ಬಿದ್ದಿರುವುದನ್ನು ಕಂಡು ಕಮಲನಗರ ವಲಯ ಅರಣ್ಯ ಅಧಿಕಾರಿಗೆಗಳಿಗೆ ಮಾಹಿತಿ ನೀಡಿ ಜಿಂಕೆ ಶವ ಹಸ್ತಾಂತರ ಮಾಡಿದರು. ಮಾಹಿತಿ ತಿಳಿದ ಕೂಡಲ ಸ್ಥಳಕ್ಕೆ ಧಾವಿಸಿದ ಉಪ ವಲಯ ಅರಣ್ಯ ಅಧಿಕಾರ ಸುಧಾಕರ ಬಿರಾದಾರ ಮತ್ತು ಸಿಬ್ಬಂದಿ ಮೆಹಬೂಬ್ ಬೆಳಕೋಣಿ ಜಿಂಕೆಯ ಪಾರ್ಥಿವ ಶರಿವನ್ನು ತೆಗೆದುಕೊಂಡು ಹೋಗಿ, ಕಮಲನಗರ ಪಶು ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ಕಳಿಸಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿ, ತಾಲ್ಲೂಕಿನ ಯಾವದೇ ಪ್ರದೇಶದಲ್ಲಿ ವನ್ಯ ಜೀವಿಗಳ ರಕ್ಷಣೆಗೆ ನಾವು ಸದಾ ಸಿದ್ದರಾಗಿರುತ್ತೇವೆ, ಸಾರ್ವಜನಿಕ ಪ್ರಾಣಿ ರಕ್ಷಣೆ ಯಲ್ಲಿ ಸಹಕರಿಸಿ ಮಾಹಿತಿ ನೀಡಲು ತಿಳಿಸಿದರು.

ಪರಿಶಿಷ್ಟ ಜಾತಿ ಸಮೀಕ್ಷೆಗೆ ಶಾಂತನಗೌಡ ಚಾಲನೆ

• ಉದಯವಾಹಿನಿ ಹೊನ್ನಾಳಿ

ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಆರಂಭವಾಗಿದ್ದು, ಪರಿಶಿಷ್ಟ ಜಾತಿ ಸಮುದಾಯದವರು ತಮ್ಮ ಜಾತಿ ಬಗ್ಗೆ ನಿಖರ ಮಾಹಿತಿ ನೀಡಬೇಕು ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು. ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಗೆ ಪಟ್ಟಣದ ದುರ್ಗಿಗುಡಿ ಬಡಾವಣೆಯ 5ನೇ ಅಡ್ಡ ರಸ್ತೆಯಲ್ಲಿರುವ ಮನೆಯೊಂದರಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು. ಕುಟುಂಬದ ಸದಸ್ಯರು ಪಡೆದಿರುವ ಶಿಕ್ಷಣ, ವೃತ್ತಿ, ವಾಸಿಸುವ ಪ್ರದೇಶ, ಹೊಂದಿರುವ ಸೌಲಭ್ಯ ಸೇರಿದಂತೆ ಇತರ ಮಾಹಿತಿ, ಆರ್ಥಿಕತೆಗೆ ಸಂಬಂಧಿಸಿದ ಮಾಹಿತಿ, ಸರ್ಕಾರಿ ಉದ್ಯೋಗ, ಖಾಸಗಿ ಉದ್ಯೋಗ, ವೃತ್ತಿ, ಭೂಮಿ ಒಡೆತನ, ಮನೆ, ಆದಾಯ ಇತ್ಯಾದಿ ಅಂಶಗಳ ಕುರಿತು ಸಮಗ್ರ ಮಾಹಿತಿಯನ್ನು ಸಮೀಕ್ಷಾದಾರರಿಗೆ ಕಡ್ಡಾಯವಾಗಿ ನೀಡಬೇಕು ಎಂದು ಹೇಳಿದರು.

ಅಕ್ರಮ ದನ ಸಾಗಣೆ ಪತ್ತೆ ನಾಲ್ಕು ಜಾನುವಾರುಗಳ ರಕ್ಷಣೆ

• ಉದಯವಾಹಿನಿ ಪುತ್ತೂರು

ಉಪ್ಪಿಂಗಡಿ ಸಮೀಪದ ಉರುವಾಲು ಗ್ರಾಮದ ಕುಪ್ಪೆಟ್ಟಿ ಎಂಬಲ್ಲಿ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಜಾನವಾರುಗಳನ್ನು ಉಪ್ಪಿನಂಗಡಿ ಪೊಲೀಸರು ಪತ್ತೆ ಹಚ್ಚಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ವಾಹನ ಚಾಲಕ ಜಯಂತ್ ಗೌಡ ಎಂಬಾತನನ್ನು ಬಂಧಿಸಿದ್ದಾರೆ. ಬಂಧಿತ ಜಯಂತ್ ಗೌಡ ಕುಪ್ಪೆಟ್ಟಿಯ ಬದ್ರುದ್ದೀನ್ ಎಂಬಾತನಿಗೆ ಜಾನುವಾರುಗಳನ್ನು ಸಾಗಿಸುತ್ತಿದ್ದ ಎನ್ನಲಾಗಿದ್ದು, ಈ ಬಗ್ಗೆ ಮಾಹಿತಿ ಪಡೆದ ಪೊಲೀಸರು ಪರಿಶೀಲನೆ ನಡೆಸಿದಾಗ ಅದರಲ್ಲಿ ದಾಖಲೆ ಇಲ್ಲದೆ ಸಾಗಾಟ ಮಾಡಲಾಗುತ್ತಿದ್ದ ನಾಲ್ಕು ಜಾನುವಾರುಗಳು ಪತ್ತೆಯಾಗಿದ್ದು, ಘಟನೆಗೆ ಸಂಬಂಧಿಸಿ ಮೂವರ ವಿರುದ್ಧ ಕೇಸು ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಅಂಗಡಿ ಬಾಗಿಲು ಮುಚ್ಚಿ ಬೆಂಬಲ

• ಉದಯವಾಹಿನಿ, ಕೊಪ್ಪ

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿ, ಮಂಗಳೂರಿನಲ್ಲಿ ನಡೆದ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ ಖಂಡಿಸಿ ವಿಶ್ವ ಹಿಂದೂ ಪರಿಷತ್ ಬಜರಂಗದಳ ಕರೆ ನೀಡಿದ್ದ ಕೊಪ್ಪ ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಪಟ್ಟಣದಲ್ಲಿ ವರ್ತಕರು ಬೆಳಿಗ್ಗೆಯಿಂದಲೇ ಅಂಗಡಿ ಮುಂಗಟ್ಟುಗಳ ಬಾಗಿಲು ಮು

ಕಾಂಗ್ರೇಸ್‌ನ ಎಲ್ಲಾ ತಪ್ಪುಗಳ ಜವಾಬ್ದಾರಿ ಹೊರುವೆ: ರಾಹುಲ್ ಅಚ್ಚರಿ ಹೇಳಿಕೆ

ಬ್ರೌನ್ ವಿಶ್ವವಿದ್ಯಾಲಯದಲ್ಲಿ ಸಂವಾದದಲ್ಲಿ ರಾಹುಲ್ ಮಾತು ರಾಮ ಕೇವಲ ಪೌರಾಣಿಕ ಪಾತ್ರವಷ್ಟೇ ಎಂದ ರಾಹುಲ್ ಹೊಸ ವಿವಾದ



ನ್ಯೂಯಾರ್ಕ್: ಇತಿಹಾಸದಲ್ಲಿ ಕಾಂಗ್ರೇಸ್ ಪಕ್ಷದಿಂದ ಆಗಿರುವ ಎಲ್ಲಾ ತಪ್ಪುಗಳ ಜವಾಬ್ದಾರಿ ಹೊರಲು ಸಿದ್ಧನಿದ್ದೇನೆ,'' ಎಂದು ಹೇಳುವ ಮೂಲಕ ಕಾಂಗ್ರೇಸ್ ನಾಯಕ ಹಾಗೂ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅಚ್ಚರಿ ಮೂಡಿಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ನಡೆದ ಸಂವಾದದಲ್ಲಿ ಭಾಗಿಯಾಗಿದ್ದ ಅವರಿಗೆ ಸಿಖ್ ವ್ಯಕ್ತಿಯೊಬ್ಬರು ಪ್ರಶ್ನೆ ಕೇಳಿದರು. ಬಿಜೆಪಿ ಕಲ್ಪನೆಯ ಭಾರತದಿಂದ ಭಯವಾಗುತ್ತದೆ ಎಂದು ಹೇಳುವ ನೀವು ಇದುವರೆಗೂ ಸಿಖ್ ಸಮುದಾಯದ ಜತೆಗೆ ರಾಜಿ ಮಾಡಿಕೊಂಡಿಲ್ಲ. ಆನಂದಪುರ ಸಾಹಿಬ್ ನಿರ್ಣಯವನ್ನು ಪ್ರತ್ಯೇಕತಾವಾದ ಎಂದು ಹಣೆಪಟ್ಟಿ ಕಟ್ಟಿದ್ದು ಸೇರಿದಂತೆ ಅನೇಕ ತಪ್ಪುಗಳನ್ನು ಕಾಂಗ್ರೇಸ್ ಎಸಗಿದೆಯಲ್ಲ,'' ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ರಾಹುಲ್ ಗಾಂಧಿ, ''ನಾನು ಪಕ್ಷದ ಮುಖ್ಯವಾಹಿನಿಯಲ್ಲಿ ಇಲ್ಲದೇ ಇರುವಾಗ ಪಕ್ಷದಿಂದ ಅನೇಕ ತಪ್ಪುಗಳು ಆಗಿವೆ. ಆದರೆ, ಇತಿಹಾಸದಲ್ಲಿ ಕಾಂಗ್ರೇಸ್‌ನಿಂದ ಆಗಿರುವ ಎಲ್ಲಾ ತಪ್ಪುಗಳ ಜವಾಬ್ದಾರಿಯನ್ನು ಸಂತೋಷದಿಂದ ಹೊತ್ತುಕೊಳ್ಳುತ್ತೇನೆ.

ನಾನು ಸಾರ್ವಜನಿಕವಾಗಿ ಈಗಾಗಲೇ 1980ರಲ್ಲಿ ನಡೆದ ಸಿಖ್ ವಿರೋಧಿ ದಂಗೆಯು ತಪ್ಪು ಎಂದು ಹೇಳಿದ್ದೇನೆ. ಸ್ವರ್ಣಮಂದಿರಕ್ಕೆ ಅನೇಕ ಬಾರಿ ಭೇಟಿ ನೀಡಿದ್ದೇನೆ. ನನಗೆ ಸಿಖ್ ಸಮುದಾಯದ ಜತೆಗೆ ಬಹಳ ಆತ್ಮೀಯ ಬಾಂಧವ್ಯವಿದೆ, ಎಂದಿದ್ದಾರೆ. ಭಯ ಇರುವಲ್ಲಿ ಜನರ ವಿರುದ್ಧ ಸಿಟ್ಟು ಹಾಗೂ ದ್ವೇಷ ಸೃಷ್ಟಿಯಾಗುತ್ತದೆ. ನಿಮಗೆ ಭಯವೇ ಇಲ್ಲ ಎಂದಾದರೆ, ನೀವು ಯಾರನ್ನೂ ಕೂಡ ದ್ವೇಷಿಸಲ್ಲ. ಗಾಂಧೀಜಿ ಇಂಥ ಚಿಂತನೆ ಹೊಂದಿದ್ದರು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಈ ಮೂವರನ್ನು ಪಕ್ಷದಿಂದ ಉಚ್ಚಾಟಿಸಿ: ಸಿಖ್ ವಿರೋಧಿ ದಂಗೆಯ ಹೊಣೆ ಹೊರುವುದಾದರೆ ಮೊದಲು ಜಗದೀಶ್ ಟೈಟ್ಲರ್, ಕಮಲ್‌ನಾಥ್ ಹಾಗೂ ಸ್ಯಾಮ್ ಪಿತ್ರೊಡಾ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು. ಆಗ ಮಾತ್ರವೇ ಪೂರ್ಣಪ್ರಮಾಣದಲ್ಲಿ ಪಶ್ಚಾತ್ತಾಪ ಪಟ್ಟಂತೆ ಆಗಲಿದೆ ಎಂದು ಬಿಜೆಪಿ ವಕ್ತಾರ ಆರ್.ಪಿ. ಸಿಂಗ್ ಪ್ರತಿಕ್ರಿಯೆ ನೀಡಿದ್ದಾರೆ.

ರಾಹುಲ್ ಗಾಂಧಿ ಹೇಳಿಕೆ

ರಾಮ ಕೇವಲ ಪೌರಾಣಿಕ ಪಾತ್ರ ಅಷ್ಟೇ!

ರಾಮ ಕೇವಲ ಪೌರಾಣಿಕ ಪಾತ್ರವಷ್ಟೇ, ಎನ್ನುವ ಮೂಲಕ ರಾಹುಲ್ ಗಾಂಧಿ ಹೊಸ ವಿವಾದ ಸೃಷ್ಟಿಸಿದ್ದಾರೆ. ರಾಹುಲ್ ಹೇಳಿಕೆಯನ್ನು ಖಂಡಿಸಿರುವ ಬಿಜೆಪಿ, ರಾಹುಲ್ ಅವರದ್ದು ಹಿಂದೂ ವಿರೋಧಿ ಹಾಗೂ ರಾಮ ವಿರೋಧಿ ಮನಸ್ಥಿತಿ, ಎಂದು ವಾಗ್ದಾಳಿ ನಡೆಸಿದೆ. ನಮ್ಮ ಪೌರಾಣಿಕ ಪಾತ್ರಗಳಲ್ಲಿ ಒಂದಾದ ರಾಮ, ಕ್ಷಮಾಗುಣ ಹಾಗೂ ಕಾರುಣ್ಯದ ಪ್ರತೀಕ. ಬಿಜೆಪಿ ಹೇಳುವ ಹಿಂದೂ ಎಂಬ ಕಲ್ಪನೆಯನ್ನು ನಾನು ಒಪ್ಪಲ್ಲ. ಹಿಂದೂ ಎನ್ನುವುದು ಬಹಳಷ್ಟು ವಿಸ್ತಾರ ಹಾಗೂ ಸಹಿಷ್ಣು ಎನ್ನುವುದು ನನ್ನ ಕಲ್ಪನೆ, ಎಂದು ಅಮೆರಿಕದ ವಿವಿಯಲ್ಲಿ ಹೇಳಿದ್ದಾರೆ.

2 ತಿಂಗಳುಗಳಿಗೆ ಬೇಕಾಗುವಷ್ಟು ದಿನಸಿ, ಔಷಧಿ ಸಂಗ್ರಹಿಸಿಟ್ಟುಕೊಳ್ಳಿ

ಇಸ್ಲಾಮಾಬಾದ್: ಕಾಶ್ಮೀರದ ಪಹಲ್ಗಾಮ್ ಹುಲ್ಲುಗಾವಲಿನಲ್ಲಿ ಉಗ್ರರ ಕೃತ್ಯದ ನಂತರ, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮಿಲಿಟರಿ ಮುಖ್ಯಸ್ಥರನ್ನು ಸತತವಾಗಿ ಭೇಟಿಯಾಗುತ್ತಿದ್ದಾರೆ. ನೌಕಾಪಡೆಯ ಎಡ್ಮಿರಲ್ ದಿನೇಶ್ ಕೆ ತ್ರಿಪಾಠಿ ಮತ್ತು ವಾಯುಪಡೆಯ ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಅವರನ್ನು ಪ್ರತ್ಯೇಕವಾಗಿ ಕಚೇರಿಗೆ ಕರೆಸಿ ಮಾತುಕತೆ ನಡೆಸಿದ್ದಾರೆ. ಭಾರತಕ್ಕೆ ಎಚ್ಚರಿಕೆಯನ್ನು ನೀಡಿದ್ದಾರೆ. ಸಿಂಧೂ ನದಿಗೆ ಅಣೆಕಟ್ಟನ್ನು ಕಟ್ಟಿದ್ದೇ ಆದಲ್ಲಿ ಅದನ್ನು ಒಡೆದು ಹಾಕುತ್ತೇವೆ. ನದಿನೀರನ್ನು ತಡೆಯುವುದು ಯುದ್ದಕ್ಕೆ ಸಮ ಎನ್ನುವ ಬೆದರಿಕೆಯನ್ನು ಅವರು ಒಡ್ಡಿದ್ದಾರೆ.

ಎರಡು ತಿಂಗಳಿಗಾಗುವಷ್ಟು ಆಹಾರವನ್ನು ಶೇಖರಿಸಿಟ್ಟುಕೊಳ್ಳಿ ಎಂದು ಗಡಿರೇಖೆಯ 13 ಕ್ಷೇತ್ರಗಳ ಜನತೆಗೆ ಅಲ್ಲಿನ ಪ್ರಧಾನಿ ಸೂಚಿಸಿದ್ದಾರೆ. ಜೊತೆಗೆ, ಆಹಾರ, ಔಷಧಿ ಮತ್ತು ಮೂಲಭೂತ ಅಗತ್ಯತೆಗಳನ್ನು ಪೂರೈಸಲು ತುರ್ತಾಗಿ ನೂರು ಕೋಟಿ ರೂ. ಹಣವನ್ನು ಸರ್ಕಾರ ಮೀಸಲಿಟ್ಟಿದೆ ಎಂದು ಪಿಎಂ ಚೌಧುರಿ ಅನ್ವರ್ ಹೇಳಿದ್ದಾರೆಂದು ವರದಿಯಾಗಿದೆ. ಈಗಾಗಲೇ, ಭದ್ರತಾ ಕಾರಣವನ್ನು ಮುಂದಿಟ್ಟುಕೊಂಡು, ಪಾಕಿಸ್ತಾನದ ಯಾವುದೇ ನಗರಗಳಿಂದ ಪಿಒಕೆ ಭಾಗಕ್ಕೆ ವಿಮಾನಯಾನವನ್ನು ರದ್ದುಗೊಳಿಸಲಾಗಿದೆ. ಜೊತೆಗೆ, 450 ಕಿ.ಮೀ ಕ್ರಮಿಸಬಲ್ಲ ಅಬ್ದಾಲಿ ಅಣ್ವಸ್ತ್ರಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ಪಾಕಿಸ್ತಾನ ಹೇಳಿಕೊಂಡಿದೆ. ಭಾರತದ ವಿಮಾನಗಳಿಗೆ ತಮ್ಮ ವಾಯುಪ್ರದೇಶವನ್ನು ಪಾಕಿಸ್ತಾನ ಬಂದ್ ಮಾಡಿ ಸಾಕಷ್ಟು ಆರ್ಥಿಕ ಹೊಡೆತವನ್ನು ಎದುರಿಸುತ್ತಿದೆ.

ಈ ನಡುವೆ, ಯುರೋಪ್ ಖಂಡದ ವಿವಿಧ ದೇಶಗಳು, ಯುದ್ದದ ಭೀತಿಯ ಹಿನ್ನಲೆಯಲ್ಲಿ, ಪಾಕ್ ವಾಯುಪ್ರದೇಶ ಬಳಸುವುದನ್ನು ಸದ್ಯಕ್ಕೆ ಸಸ್ಪೆಂಡ್ ಮಾಡಿದೆ.

ಮೇ 9ರಂದು ರಷ್ಯಾದ ಮಾಸ್ಕೋದಲ್ಲಿ ವಿಜಯ ದಿನಾಚರಣೆಯ ಪಥಸಂಚಲನ ಕಾರ್ಯಕ್ರಮದಲ್ಲಿ ಪ್ರಧಾನಿ ಭಾಗವಹಿಸುವುದು ನಿಗದಿಯಾಗಿತ್ತು.

ಆದರೆ ಅವರ ಭೇಟಿ ರದ್ದಾಗಿತ್ತು, ಈಗ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕೂಡಾ, ರಷ್ಯಾ ಪ್ರವಾಸಕ್ಕೆ ಹಾಜರಾಗುತ್ತಿಲ್ಲ. ಭಾರತದ ಪರವಾಗಿ, ರಕ್ಷಣಾ ರಾಜ್ಯ ಸಚಿವರು ಭಾಗಿಯಾಗಲಿದ್ದಾರೆ. ಪ್ರಧಾನಿ, ಮಿಲಿಟರಿ ಮುಖ್ಯಸ್ಥರನ್ನು ಸತತವಾಗಿ ಭೇಟಿಯಾಗುತ್ತಿರುವುದು, ಪಿಒಕೆ ಸರ್ಕಾರದ ಆದೇಶ, ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿರುವ ಬಿಕ್ಕಟ್ಟು ಈ ಎಲ್ಲವನ್ನೂ ಅವಲೋಕಿಸಿದಾಗ, ಎರಡು ದೇಶಗಳ ನಡುವೆ ಯುದ್ದದ ಭೀತಿಯನ್ನು ಇನ್ನಷ್ಟು ಗಾಢವಾಗಿಸಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ವಿಶ್ವದ ಅತಿ ದೊಡ್ಡ ಎಲೆಕ್ಟಿಕ್ ಹಡಗು ಲೋಕಾರ್ಪಣೆ

ಸಿಡ್ನಿ, ಆಸ್ಟ್ರೇಲಿಯಾದಲ್ಲಿ ಅತಿ ದೊಡ್ಡ ಎಲೆಕ್ಟಿಕ್ ಹಡಗು ಹಲ್ 096 ಲೋಕಾರ್ಪಣೆಯಾಗಿದೆ. ಈ ಹಡಗು ಸುಮಾರು 2,100 ಪ್ರಯಾಣಿಕರು ಮತ್ತು 225 ವಾಹನಗಳಿಗೆ ಸ್ಥಳಾವಕಾಶ ಕಲ್ಪಿಸುತ್ತದೆ. ಆಸ್ಟ್ರೇಲಿಯಾದ ದೋಣಿ ತಯಾರಕರೊಬ್ಬರು ವಿಶ್ವದ ಅತಿದೊಡ್ಡ ಬ್ಯಾಟರಿ ಚಾಲಿತ ಹಡಗು ಹಲ್ 096 ಅನ್ನು ಪ್ರಾರಂಭಿಸಿದ್ದಾರೆ.

ಟ್ಯಾನಿಯನ್ ತಯಾರಕ ಇನ್ಯಾಟ್ ನಿರ್ಮಿಸಿದ ಇದು 130 ಮೀಟರ್ ಅಳತೆ ಹೊಂದಿದೆ. ಕಳೆದ ಹೋಬರ್ಟ್‌ನಲ್ಲಿ ಬಿಡುಗಡೆಯಾದ ಹಲ್ 096 ಚೀನಾ ಜೊರಿಲ್ಲಾ ಆಗಿ ಕಾರ್ಯನಿರ್ವಹಿಸಲಿದ್ದು, ಸುಮಾರು 2,100 ಪ್ರಯಾಣಿಕರು ಮತ್ತು 225 ವಾಹನಗಳಿಗೆ ಸ್ಥಳಾವಕಾಶ ಕಲ್ಪಿಸುತ್ತದೆ. ಇದಕ್ಕೆ ಉರುಗೈಯ ಚಲನಚಿತ್ರ ಮತ್ತು ರಂಗಭೂಮಿ ತಾರೆಯ ಹೆಸರನ್ನು ಇಡಲಾಗಿದೆ. ಬ್ಯಾಟರಿ ಚಾಲಿತ ವಾಹನ ದೋಣಿ ಉರುಗ್ವೆ ನಗರ, ಮಾಂಟೆವಿಡಿಯೊ. ಇತರ ಎರಡು ಉರುಗ್ವೆ ಪಟ್ಟಣಗಳು ಮತ್ತು ಅರ್ಜೆಂಟೀನಾದ ರಾಜಧಾನಿ ಬ್ಯೂನಸ್ ಐರಿಸ್ ನಡುವೆ ಪ್ರಯಾಣಿಸಲಿದೆ ಎಂದು ದಿ ಗಾರ್ಡಿಯನ್ ವರದಿ ಮಾಡಿದೆ. ಹಡಗಿನ ಒಳಾಂಗಣವು ಅಪೂರ್ಣವಾಗಿದೆ, ಆದರೆ ಇದು 2,300 ಚದರ ಮೀಟರ್ ಸುಂಕ-ಮುಕ್ತ ಚಿಲ್ಲರೆ ಶಾಪಿಂಗ್ ಡೆಕ್ ಅನ್ನು ಹೊಂದಿರುತ್ತದೆ, ಇದು ಸರಿಸುಮಾರು 100 ಸಾಮಾನ್ಯ ಆಸ್ಟ್ರೇಲಿಯಾದ ಮನೆಗಳ ಗಾತ್ರವಾಗಿದೆ. ಹಲ್ 096 250 ಟನ್ ಗಿಂತ ಹೆಚ್ಚು ಬ್ಯಾಟರಿಗಳನ್ನು ಹೊಂದಿದೆ ಮತ್ತು ಪ್ರಸ್ತುತ 40 ಮೆಗಾವ್ಯಾಟ್ ಗಂಟೆಗಳಿಗಿಂತ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವ ಶಕ್ತಿ ಶೇಖರಣಾ ವ್ಯವಸ್ಥೆಯನ್ನು (ಇಎಸ್‌ಎಸ್) ಹೊಂದಿದೆ. ಇಎಸ್‌ಎಸ್ ಹಿಂದಿನ ಯಾವುದೇ ಎಂದಿಗಿಂತ ನಾಲ್ಕು ಪಟ್ಟು ದೊಡ್ಡದಾಗಿದೆ.

45 ವರ್ಷದ ಮಹಿಳೆ ಮೇಲೆ ಗ್ಯಾಂಗ್ ರೇಪ್, ಕೊಲೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಶ್ರೀನಗರದ ಹೊರವಲಯ ನಿಶಾತ್ ಪ್ರದೇಶದಲ್ಲಿ 45 ವರ್ಷದ ಅಲೆಮಾರಿ ಮಹಿಳೆಯ ಮೇಲೆ ನಾಲ್ವರು ಪುರುಷರು ಸಾಮೂಹಿಕ ಅತ್ಯಾಚಾರವೆಸಗಿ ಕೊಲೆ ಮಾಡಿದ್ದಾರೆ.

ತೀವ್ರವಾಗಿ ಗಾಯಗೊಂಡಿದ್ದ ಮಹಿಳೆ ಆಸ್ಪತ್ರೆಗೆ ದಾಖಲಾಗುತ್ತಿದ್ದಂತೆಯೇ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ.

ಈ ಘಟನೆಯು ಕಣಿವೆಯಲ್ಲಿ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದ್ದು, ಆರೋಪಿಗಳ ವಿರುದ್ಧ ತ್ವರಿತ ಕ್ರಮಕ್ಕೆ ಬೇಡಿಕೆಗಳು ಹೆಚ್ಚಾಗುತ್ತಿವೆ. ವಾಟರ್ ವರ್ಕ್ಸ್ ರಸ್ತೆಯ ನಿಶಾತ್ ಬಳಿ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ಕಾನೂನಿನ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ. ಅಪರಾಧದಲ್ಲಿ ಭಾಗಿಯಾಗಿರುವ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಮಹಿಳೆ ಅಲೆಮಾರಿ ಬಕರ್ವಾಲ್ ಸಮುದಾಯಕ್ಕೆ ಸೇರಿದ್ದು, ಆಕೆ ಸಮುದಾಯದ ಇತರ ಸದಸ್ಯರೊಂದಿಗೆ ಒಂದು ವಾರದ ಹಿಂದೆ ತಮ್ಮ ಜಾನುವಾರುಗಳೊಂದಿಗೆ ರಿಯಾಸಿ ಜಿಲ್ಲೆಯಿಂದ ವಲಸೆ ಬಂದಿದ್ದರು. ನಾವು ಬೇಸಿಗೆ ಮತ್ತು ಚಳಿಗಾಲದಲ್ಲಿ ಈ ಸ್ಥಳಕ್ಕೆ ವಲಸೆ ಹೋಗಿ ನಂತರ ವಾಪಸ್ಸಾಗುತ್ತೇವೆ ಎಂದು ಅವರ ಮಗ ಹೇಳಿದರು.

ಸಮುದಾಯದ ಸದಸ್ಯರು ಹೇಳುವಂತೆ, ಮಹಿಳೆಯು ತನ್ನ ಡೇರೆಯಿಂದ ಸಂಜೆ 5 ಗಂಟೆಗೆ ಹತ್ತಿರದ ಪ್ರದೇಶದಲ್ಲಿ ಜಾನುವಾರು ಮೇಯಿಸಲು ಹೋಗಿದ್ದರು. ನಂತರ ಹಿಂತಿರುಗದಿದ್ದಾಗ ಹುಡುಕಾಡುತ್ತಿದ್ದಾಗ ಗಾಯಗೊಂಡ ಮಹಿಳೆ ಬಳಿ ಕೆಲವು ವ್ಯಕ್ತಿಗಳು ಕಂಡುಬಂದರು. ಶೋಧ ಕಾರ್ಯಾಚರಣೆ ವೇಳೆ ಅವರಿಗೆ ಒಬ್ಬ ವ್ಯಕ್ತಿಯೊಬ್ಬ ಹುಡುಕುತ್ತಿದ್ದರೆ ಇತರರು ಓಡಿ ಹೋದರು. ಸಿಕ್ಕಿಬಿದ್ದ ಒಬ್ಬ ವ್ಯಕ್ತಿಯನ್ನು ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ ಎಂದು ಅವರು ತಿಳಿಸಿದರು.

ಗಾಯಗೊಂಡ ಮಹಿಳೆಯನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಲ್ಲಿ ವೈದ್ಯರು ಇರಲಿಲ್ಲ. ಬಳಿಕ ಮಹಿಳೆಯನ್ನು ಶ್ರೀನಗರ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಅಲ್ಲಿ ಆಕೆ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು. ರಕ್ತ ಮೆತ್ತಿಕೊಂಡಿದ್ದ ಓರ್ವ ಆರೋಪಿಯನ್ನು ಹಿಡಿದು ಪೊಲೀಸರ ವಶಕ್ಕೆ ನೀಡಿದ್ದೇವು ಎಂದು ಮೃತ ಮಹಿಳೆಯ ಮಗ ಹೇಳಿದ್ದಾನೆ.

ಕಣಿವೆಯಲ್ಲಿ ವ್ಯಾಪಕ ಆಕ್ರೋಶ!

ಈ ಘಟನೆ ಕಣಿವೆ ಪ್ರದೇಶಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದು, ಆರೋಪಿಗಳ ವಿರುದ್ಧ ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ರಫೀಕ್ ನಾಯಕ್ ಒತ್ತಾಯಿಸಿದ್ದಾರೆ. ಬುಡಕಟ್ಟು ಮಹಿಳೆ ಮೇಲೆ ಬರ್ಬರ ಕೃತ್ಯವೆಸಗಿರುವ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪೀಪಲ್ಸ್ ಕಾನ್ಫರೆನ್ಸ್ ಅಧ್ಯಕ್ಷ ಹಾಗೂ ಶಾಸಕ ಸಜ್ಜಾದ್ ಘನಿ ಲೋನ್ ಆಗ್ರಹಿಸಿದ್ದಾರೆ,

ನ್ಯಾ. ವರ್ಮಾ ಮನೆಯಲ್ಲಿ ನಗದು ಪತ್ತೆ ಪ್ರಕರಣ

ನವದೆಹಲಿ: ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಲ್ಲಿ ನಗದು ಪತ್ತೆ ಪ್ರಕರಣದ ತನಿಖೆಗಾಗಿ ಸುಪ್ರೀಂ ಕೋರ್ಟ್ ನೇಮಿಸಿದ್ದ ಮೂವರು ನ್ಯಾಯಾಧೀಶರ ತನಿಖಾ ಸಮಿತಿಯು ಸೋಮವಾರ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರಿಗೆ ವರದಿ ಸಲ್ಲಿಸಿದೆ.

ಮಾರ್ಚ್ 14 ರಂದು ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಲ್ಲಿ ಕಂತೆ ಕಂತೆ ಹಣ ಪತ್ತೆಯಾಗಿತ್ತು. ಈ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಮಾರ್ಚ್ 25 ರಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ನ್ಯಾಯಮೂರ್ತಿ ಜಿ.ಎಸ್. ಸಂಧಾವಾಲಿಯಾ ಮತ್ತು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ಅವರನ್ನು ಒಳಗೊಂಡ ಮೂವರು ಸದಸ್ಯರ ತನಿಖಾ ಸಮಿತಿ ರಚಿಸಿತ್ತು.

ನ್ಯಾಯಮೂರ್ತಿ ವರ್ಮಾ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ತನಿಖೆ ನಡೆಸುವಂತೆ ಸುಪ್ರೀಂ ಕೋರ್ಟ್ ಸಮಿತಿಗೆ ನಿರ್ದೇಶನ ನೀಡಿತ್ತು.

ಸುಪ್ರೀಂ ನಿರ್ದೇಶನದಂತೆ ಮೂವರು ನ್ಯಾಯಾಧೀಶರ ತನಿಖಾ ಸಮಿತಿಯು ದೆಹಲಿಯ 30 ತುಘಲಕ್ ಕ್ರೆಸೆಂಟ್‌ನಲ್ಲಿರುವ ನ್ಯಾಯಮೂರ್ತಿ ವರ್ಮಾ ಅವರ ಅಧಿಕೃತ ನಿವಾಸಕ್ಕೆ ಭೇಟಿ ನೀಡಿ ತನಿಖೆ ನಡೆಸಿದೆ. ತಮ್ಮ ವಿರುದ್ಧದ ಎಲ್ಲಾ ಆರೋಪಗಳನ್ನು ನ್ಯಾಯಮೂರ್ತಿ ವರ್ಮಾ ಅವರು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಬೆಂಕಿ ಹೊತ್ತಿಕೊಂಡ ಕೊಠಡಿ ಮತ್ತು ನಗದು ಪತ್ತೆಯಾಗಿದೆ ಎಂದು ಹೇಳಲಾದ ಕೊಠಡಿ ಒಂದು ಔಟ್‌ಹೌಸ್ ಆಗಿದ್ದು, ಅದು ನ್ಯಾಯಾಧೀಶರು ಮತ್ತು ಕುಟುಂಬ ವಾಸಿಸುವ ಮುಖ್ಯ ಕಟ್ಟಡವಲ್ಲ ಎಂದು ಹೇಳಿದ್ದಾರೆ.

ಚಿತ್ರಗಳಿಗೆ ಶೇ 100ರಷ್ಟು ತೆರಿಗೆ ಘೋಷಿಸಿದ ಟ್ರಂಪ್

ವಾಷಿಂಗ್ಟನ್: ವಿದೇಶಗಳಲ್ಲಿ ನಿರ್ಮಾಣವಾಗುವ ಚಲನಚಿತ್ರಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇತರ ದೇಶಗಳು ಚಲನಚಿತ್ರ ನಿರ್ಮಾಪಕರನ್ನು ಆಕರ್ಷಿಸಲು ನೀಡುತ್ತಿರುವ ಪ್ರೋತ್ಸಾಹಕ ಕ್ರಮಗಳಿಂದಾಗಿ ಅಮೆರಿಕದ ಚಲನಚಿತ್ರೋದ್ಯಮವು ಅತ್ಯಂತ ವೇಗವಾಗಿ ನಶಿಸುತ್ತಿದೆ ಎಂದು ಅವರು ಹೇಳಿದ್ದಾರೆ. ವಿದೇಶದಲ್ಲಿ ನಿರ್ಮಾಣವಾಗುವ ಎಲ್ಲಾ ಚಲನಚಿತ್ರಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸುವ ಪ್ರಕ್ರಿಯೆಯನ್ನು ತಕ್ಷಣವೇ ಆರಂಭಿಸಲು ವಾಣಿಜ್ಯ ಇಲಾಖೆಯಂತಹ ಸಂಬಂಧಿತ ಸರ್ಕಾರಿ ಸಂಸ್ಥೆಗಳಿಗೆ ಅಧಿಕಾರ ನೀಡುತ್ತಿರುವುದಾಗಿ ಟ್ರಂಪ್ ಹೇಳಿದ್ದಾರೆ. ನಾವು ಅಮೆರಿಕದಲ್ಲಿ ನಿರ್ಮಾಣವಾಗುವ ಚಿತ್ರಗಳನ್ನೇ ಬಯಸುತ್ತೇವೆ ಎಂದೂ ಅವರು ಹೇಳಿದ್ದಾರೆ.

ವಿದೇಶಗಳಲ್ಲಿ ನಿರ್ಮಾಣವಾಗಿ ಅಮೆರಿಕದಲ್ಲಿ ತೆರೆ ಕಾಣುವ ಚಿತ್ರಗಳ ಮೇಲೆ ಶೇ 100ರಷ್ಟು ತೆರಿಗೆ ವಿಧಿಸುವತ್ತ ನಾವು ಕಾರ್ಯೋನ್ಮುಖರಾಗಿದ್ದೇವೆ ಎಂದು ವಾಣಿಜ್ಯ ಇಲಾಖೆಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಸಿನಿಮಾಗಳ ಮೇಲಿನ ಹೊಸ ಸುಂಕ ನೀತಿಯನ್ನು ಹೇಗೆ ಜಾರಿಗೊಳಿಸಲಾಗುತ್ತದೆ ಎಂಬ ಬಗ್ಗೆ ಟ್ರಂಪ್ ಆಗಲಿ, ವಾಣಿಜ್ಯ ಇಲಾಖೆಯಾಗಲಿ ಹೆಚ್ಚಿನ ಮಾಹಿತಿ ಬಿಟ್ಟುಕೊಟ್ಟಿಲ್ಲ.

ಸ್ಟ್ರೀಮಿಂಗ್ ಸೇವೆಗಳಲ್ಲಿನ ಚಲನಚಿತ್ರಗಳಿಗೆ ಹಾ



ವಿಜಯ್ ದೇವರಕೊಂಡ ಮತ್ತೆ ರಶ್ಮಿಕಾ ಮಂದಣ್ಣ ಜೋಡಿ

ತೆಲುಗು ಸಿನಿಮಾಗಳ ಮೂಲಕ ಸಕ್ಸಸ್‌ಫುಲ್ ಜೋಡಿ ಎನಿಸಿಕೊಂಡಿರುವ ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಬಗ್ಗೆ ಬಿಗ್ ನ್ಯೂಸ್‌ವೊಂದು ಸಿಕ್ಕಿದೆ. ವಿಜಯ್ ಹೊಸ ಸಿನಿಮಾಗೆ ರಶ್ಮಿಕಾ ನಾಯಕಿಯಾಗಲಿದ್ದಾರೆ ಎನ್ನಲಾದ ಸುದ್ದಿಯೊಂದು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ.

ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆಯು 'ಶ್ಯಾಮ್ ಸಿಂಗ್ ರಾಯ್' ನಿರ್ದೇಶಕ ರಾಹುಲ್ ಜೊತೆ ಸಿನಿಮಾ ಮಾಡಲು ಮುಂದಾಗಿದ್ದಾರೆ. ಅವರ ನಿರ್ದೇಶನದಲ್ಲಿ ಅರ್ಜುನ್ ರೆಡ್ಡಿ ಖ್ಯಾತಿಯ ವಿಜಯ್ ನಟಿಸಲಿದ್ದಾರೆ ಎನ್ನಲಾಗಿದೆ. ಹೀಗಾಗಿ ಈ ಸಿನಿಮಾಗೆ ರಶ್ಮಿಕಾ ನಾಯಕಿ ಎಂಬ ಸುದ್ದಿ ಹರಿದಾಡುತ್ತಿದೆ. ಅದಕ್ಕೆ ಪೂರಕವೆಂಬಂತೆ ನಿರ್ಮಾಣ ಸಂಸ್ಥೆ ಜೊತೆಗಿನ ರಶ್ಮಿಕಾ ಪೋಸ್ಟ್ ಸದ್ದು ಮಾಡ್ತಿದೆ.

'ಪುಷ್ಪ 2' ಸಿನಿಮಾ ಮಾಡಿ ಗೆದ್ದಿರುವ ನಿರ್ಮಾಣ ಸಂಸ್ಥೆ ಮೈತ್ರಿ ಮೂವಿ ಮೇಕರ್ಸ್ ಮತ್ತೊಮ್ಮೆ ರಶ್ಮಿಕಾ ಮಂದಣ್ಣ ಜೊತೆ ಸಿನಿಮಾ ಮಾಡುವ ಬಗ್ಗೆ ಪರೋಕ್ಷವಾಗಿ ಸುಳಿವು ನೀಡಿದೆ. ಹೌದು ನೋಡೋಣ ಎಂದು ಬರೆದುಕೊಂಡು ರಶ್ಮಿಕಾಗೆ ನಿರ್ಮಾಣ ಸಂಸ್ಥೆ ಟ್ಯಾಗ್ ಮಾಡಿದೆ. ಅದಕ್ಕೆ ನಟಿ, ಹೌದು ಎಂಬಂತೆ ಎಂದು ರಿಯಾಕ್ಟ್ ಮಾಡಿದ್ದಾರೆ. ಈ ಸಂಭಾಷಣೆ ಫ್ಯಾನ್ಸ್ ತಲೆಗೆ ಹುಳ ಬಿಟ್ಟಂತಾಗಿದೆ.

ಬ್ಯಾನ್ ಮಾಡೋಕೆ ಅದೇನು ನೀಲಿಚಿತ್ರವಾ

ಪಾಕ್ ನಟ ಫವಾದ್ ಖಾನ್ ನಟನೆಯ 'ಅಬೀರ್ ಗುಲಾಲ್' ಸಿನಿಮಾ ಭಾರತದಲ್ಲಿ ಬ್ಯಾನ್ ಮಾಡೋಕೆ ಅದೇನು ನೀಲಿ ಚಿತ್ರವಾ ಎಂದು ಸರ್ಕಾರದ ವಿರುದ್ಧ ಪ್ರಕಾಶ್ ರಾಜ್ ಕಿಡಿಕಾರಿದ್ದಾರೆ. ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ 26 ಮಂದಿ ಬಲಿಯಾಗಿದ್ದಾರೆ. ಈ ಹಿನ್ನೆಲೆ ಪಾಕ್ ಕಲಾವಿದರಿಗೆ ಭಾರತೀಯ ಸಿನಿಮಾಗಳಲ್ಲಿ ನಟಿಸದಂತೆ ನಿಷೇಧಿಸಲಾಗಿದೆ ಅಷ್ಟೇ ಅಲ್ಲದೇ ಅವರ ಸಾಮಾಜಿಕ ಜಾಲತಾಣ ಖಾತೆಗಳನ್ನು ನಿರ್ಬಂಧಿಸಲಾಗಿದೆ. ಈ ಬಗ್ಗೆ ಸಂದರ್ಶನವೊಂದರಲ್ಲಿ ಪ್ರಕಾಶ್ ರಾಜ್ ಮಾತನಾಡಿ, ಯಾವುದೇ ಪ್ರಚಾರದ ಸಿನಿಮಾ ಆಗಿದ್ದರೂ ಯಾವುದೇ ಸಿನಿಮಾವನ್ನು ನಿಷೇಧಿಸುವುದನ್ನು ನಾನು ವಿರೋಧಿಸುತ್ತೇನೆ. ನಿಷೇಧಿಸುವ ಬಗ್ಗೆ ಜನರೇ ನಿರ್ಧರಿಸಲಿ. ನೀಲಿಚಿತ್ರ ಅಥವಾ ಮಕ್ಕಳ ಮೇಲಿನ ದೌರ್ಜನ್ಯದ ಬಗ್ಗೆ ಸಿನಿಮಾ ಅಲ್ಲ ಅಂದ್ಮೇಲೆ ನೀವು ಯಾವುದೇ ಚಿತ್ರವನ್ನು ನಿಷೇಧಿಸಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಸರ್ಕಾರದ ವಿರುದ್ಧ ನಟ ಕೆಂಡಕಾರಿದ್ದಾರೆ.

ನಿಷೇಧಿಸುವ ಬಗ್ಗೆ ಜನರೇ ನಿರ್ಧರಿಸಲಿ

ಮದುವೆ ಆದ ಐದೇ ತಿಂಗಳಿಗೆ ಗುಡ್ ನ್ಯೂಸ್

ಶೋಭಿತಾ ಧುಲಿಪಾಲ್ ಅವರ ಸಡಿಲ ಬಟ್ಟೆಗಳನ್ನು ಧರಿಸುವುದು ಮತ್ತು ಹೊಟ್ಟೆಯನ್ನು ಮುಚ್ಚಿಕೊಳ್ಳುವ ವರ್ತನೆ ಸಾಮಾಜಿಕ ಮಾಧ್ಯಮದಲ್ಲಿ ಗರ್ಭಧಾರಣೆಯ ವದಂತಿಗಳಿಗೆ ಕಾರಣವಾಗಿದೆ. ಮದುವೆಯಾದ ಐದು ತಿಂಗಳ ನಂತರ ಈ ವದಂತಿಗಳು ಹರಡುತ್ತಿವೆ. ಈ ಘಟನೆ ನಾಗ ಚೈತನ್ಯ ಮತ್ತು ಶೋಭಿತಾ ಅವರ ಬಗ್ಗೆ ಸಾಕಷ್ಟು ಚರ್ಚೆ ಹುಟ್ಟುಹಾಕಿದೆ.

ದಕ್ಷಿಣ ಭಾರತದ ನಟ ನಾಗ ಚೈತನ್ಯ ಅವರ ಪತ್ನಿ ಶೋಭಿತಾ ಧುಲಿಪಾಲ ಇತ್ತೀಚೆಗೆ ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಅವರ ಪತಿ ನಾಗ ಚೈತನ್ಯ, ಮಾವ ನಾಗಾರ್ಜುನ ಕೂಡ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಶೋಭಿತಾ ತುಂಬಾ ಸುಂದರವಾದ ಸೀರೆಯನ್ನು ಉಟ್ಟಿದ್ದರು. ಆದರೆ ಕಾರ್ಯಕ್ರಮದಲ್ಲಿ ಶೋಭಿತಾ ಅವರ ಎಚ್ಚರಿಕೆಯ ವರ್ತನೆ ನೆಟ್ಟಿಗರಲ್ಲಿ ಪ್ರಶ್ನೆಗಳನ್ನು ಹುಟ್ಟುಹಾಕಿತು. ಏಕೆಂದರೆ ಶೋಭಿತಾ ತಮ್ಮ ಸೀರೆಯ ಅಂಚನ್ನು ಕೈಯಲ್ಲಿ ಹಿಡಿದುಕೊಂಡು ಹೊಟ್ಟೆ ಮುಚ್ಚಿಕೊಳ್ಳಲು ಪ್ರಯತ್ನಿಸಿದ್ದರು. ಅವರ ಅನೇಕ ಫೋಟೋಗಳು ಮತ್ತು ವೀಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿ, ಚರ್ಚೆಗೆ ಕಾರಣವಾಗಿದೆ. ಶೋಭಿತಾ ಅವರು ಪ್ರೆಗ್ನೆಂಟಾ ಎನ್ನುವ ಪ್ರಶ್ನೆಯನ್ನು ಹುಟ್ಟುಹಾಕಿದೆ. ಕಳೆದ ಕೆಲವು ದಿನಗಳಿಂದ, ಶೋಭಿತಾ ನಿರಂತರವಾಗಿ ಸಡಿಲವಾದ ಬಟ್ಟೆಗಳನ್ನು ಧರಿಸುತ್ತಿರುವುದು ಕಂಡುಬಂದಿದೆ. ಅವರು ಸಾಮಾಜಿಕ ಮಾಧ್ಯಮಗಳಲ್ಲಿಯೂ ಇದೇ ರೀತಿಯ ಫೋಟೋಗಳನ್ನು ಪೋಸ್ಟ್ ಮಾಡುತ್ತಿದ್ದಾರೆ. ಅದಾದ ನಂತರ, 'ವೇವ್ಸ್ ಸಮ್ಮಿಟ್' ನಲ್ಲಿ ಅವರ ನಡವಳಿಕೆ ಇನ್ನಷ್ಟು ಪ್ರಶ್ನಾರ್ಹವಾಗಿ ಕಾಣಲಾರಂಭಿಸಿತು.

ಕ್ಷಮಿಸುವಂತಹ ಅಪರಾಧ ಅಲ್ಲ

ಸೋನು ನಿಗಮ್ ಅವರನ್ನು ಕನ್ನಡ ಸಿನಿಮಾಗಳಲ್ಲಿ ಹಾಡಿಸದಿರಲು ಫಿಲ್ಮ್ ಚೇಂಬರ್ ತೀರ್ಮಾನ ಕೈಗೊಂಡಿದೆ. ಈ ನಿರ್ಧಾರದ ಕುರಿತು ಮಾತನಾಡಿರುವ ಗಾಯಕಿ ಶಮಿತಾ ಮಲ್ನಾಡ್, ಕನ್ನಡ ಹಾಡು ಹಾಡಿ ಅಂದಿದ್ದಕ್ಕೆ ಉಗ್ರರ ದಾಳಿಗೆ ಹೋಲಿಸುವಂತಹದ್ದು ತುಂಬಾ ನೋವು ಕೊಡುವ ವಿಚಾರ ಎಂದು ಹೇಳಿದ್ದಾರೆ. ಕನ್ನಡ ಸಿನಿಮಾಗಳಲ್ಲಿ ಸೋನು ನಿಗಮ್ ಅವರನ್ನು ಹಾಡಿಸದಿರಲು ಫಿಲ್ಮ್ ಚೇಂಬರ್ ತೀರ್ಮಾನಿಸಿದೆ ಎಂಬುದನ್ನು ಗಾಯಕಿ ಶಮಿತಾ ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ. ಅವರು ಕ್ಷಮೆ ಕೇಳುವವರೆಗೂ ಇದು ಮುಂದುವರೆಯುತ್ತದೆ. ಅವರು ಏನಾದರೂ ಕ್ಷಮೆ ಕೇಳಿದ್ರೆ, ಮತ್ತೊಂದು ಸಭೆ ನಡೆಸಿ, ಮುಂದಿನ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ. ಸೋನು ನಿಗಮ್ ಮಾಡಿರುವುದು ಬಹಳ ದೊಡ್ಡ ಅಪರಾಧನೇ. ನಾವು ಅಭಿಮಾನಿಯಾಗಿ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಕನ್ನಡ ಭಾಷೆ ಮೊದಲು ನಮಗೆ, ಆಮೇಲೆ ನಾವು ಸಿಂಗರ್ಸ್. ಕನ್ನಡಕ್ಕೋಸ್ಕರ ಹಾಡುತ್ತಿದ್ದೇವೆ, ಕನ್ನಡದಲ್ಲಿ ಹೆಸರು ಮಾಡಿದ್ದೀವಿ ಅಂದರೆ ಕನ್ನಡ ಮೊದಲು ನಮಗೆ. ಕನ್ನಡ ಹಾಡು ಹಾಡಿ ಎಂದು ಕೇಳಿದ್ದಕ್ಕೆ ಅವರು ಯಾರೋ ಉಗ್ರರಿಗೆ ಹೋಲಿಸುವಂತಹದ್ದು ತುಂಬಾ ನೋವು ಕೊಡುವ ವಿಚಾರ ಎಂದು ಸೋನು ನಿಗಮ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ವೇದಿಕೆಗೆ ಹೋದಾಗ ಸಂಗೀತ ಅಭಿಮಾನಿಗಳು ನೆಚ್ಚಿನ ಸಿನಿಮಾ ನಟರ ಹಾಡು ಹಾಡಿ ಎಂದೆಲ್ಲಾ ಕೇಳೇ ಕೇಳುತ್ತಾರೆ. ನಾವು ಅದನ್ನು ಪ್ರಬುದ್ಧರಾಗಿ ನಿಭಾಯಿಸಬೇಕು. ಅವರು ಹೊಸಬರೇನು ಅಲ್ಲ ಶೋ ಮಾಡುವಾಗ ಸೋನು ನಿಗಮ್ ತಾಳ್ಮೆ ಕಳೆದುಕೊಳ್ಳಬಾರದಿತ್ತು ಎಂದಿದ್ದಾರೆ.

ಕನ್ನಡ ಭಾಷೆ ಮೊದಲು ನಮಗೆ

ತಂದೆ ತಾಯಿಗೆ ಹೋಲಿಸಿದ್ದ ದೀಪಿಕಾ

2015ರಲ್ಲಿ 'ತಮಾಷಾ' ಚಿತ್ರದ ಪ್ರಚಾರದ ವೇಳೆ, ರಣಬೀರ್ ಮತ್ತು ರಣವೀರ್‌ರಲ್ಲಿ ಯಾರು ಉತ್ತಮ ನಟ ಎಂದು ದೀಪಿಕಾ ಅವರನ್ನು ಕೇಳಲಾಯಿತು. ಬುದ್ಧಿವಂತಿಕೆಯಿಂದ ಅವರು ಉತ್ತರ ನೀಡಿದ್ದರು. ದೀಪಿಕಾ ಇಬ್ಬರನ್ನೂ ಮೆಚ್ಚಿದರು. ಆ ಪ್ರಕ್ರಿಯೆ ಸೋಶಿಯಲ್ ಮೀಡಿಯಾದಲ್ಲಿ ಮತ್ತೆ ವೈರಲ್ ಆಗುತ್ತಿದೆ.

ಖ್ಯಾತ ಹಿಂದಿ ಸಿನಿಮಾ ನಟಿ ದೀಪಿಕಾ ಪಡುಕೋಣೆ ಅವರ ನಟನೆ ಅದ್ಭುತವಾಗಿದ್ದು, ಯಾರಿಗೂ ಅದರ ಬಗ್ಗೆ ಯಾವುದೇ ಸಂದೇಹವಿಲ್ಲ. ಆದರೆ ದೀಪಿಕಾ ತಮ್ಮ ನಟನೆಗಾಗಿ ಮಾತ್ರ ಸುದ್ದಿಯಲ್ಲಿ ಇರುವುದಿಲ್ಲ.

ಜೊತೆಗೆ ಬೇರೆ ಕಾರಣಗಳಿಂದ ಸಾಕಷ್ಟು ಸುದ್ದಿ ಆಗುತ್ತಾರೆ. ಅವರು ಸಿನಿಮಾ ಪ್ರಚಾರದ ಸಂದರ್ಭದಲ್ಲಿ ಸಂದರ್ಶನಗಳನ್ನು ನೀಡುತ್ತಾ ಇರುತ್ತಾರೆ. ಈಗ ಅವರು ನೀಡಿದ ಹಳೆಯ ಹೇಳಿಕೆ ಒಂದು ವೈರಲ್ ಆಗಿ ಗಮನ ಸೆಳೆದಿದೆ.

ರಣವೀರ್ ಮತ್ತು ರಣಬೀರ್ ಇಬ್ಬರಲ್ಲಿ ಯಾರು ಉತ್ತಮ ನಟ ಎಂದು ದೀಪಿಕಾ ಅವರನ್ನು ಕೇಳಲಾಯಿತು. ಆಗ ದೀಪಿಕಾ ಏನು ಉತ್ತರಿಸಿದ್ದರು ಎಂಬುದನ್ನು ನೋಡೋಣ. ಈ ಘಟನೆ ರಣಬೀರ್ ಕಪೂರ್ ಮತ್ತು ದೀಪಿಕಾ ಪಡುಕೋಣೆ 2015 ರ ತಮ್ಮ ಚಲನಚಿತ್ರ 'ತಮಾಷಾ' ಪ್ರಚಾರದಲ್ಲಿದ್ದಾಗ ನಡೆದಿದೆ. ದೀಪಿಕಾ ರಣಬೀರ್ ಜೊತೆಗಿನ ಸಂಬಂಧ ಮುರಿದುಕೊಂಡು ರಣವೀರ್ ಸಿಂಗ್ ಜೊತೆ ಡೇಟಿಂಗ್ ಮಾಡುತ್ತಿದ್ದ ಸಮಯವಿದು. ತಮಾಷಾ ಚಿತ್ರದ ಪ್ರಚಾರದ ಸಮಯದಲ್ಲಿ, ರಣಬೀರ್ ಕಪೂರ್ ಮತ್ತು ರಣವೀರ್ ಸಿಂಗ್ ಇವರಲ್ಲಿ ಯಾರು ಉತ್ತಮ ನಟ ಎಂದು ನೀವು ಪರಿಗಣಿಸುತ್ತೀರಿ ಎಂದು ಕೇಳಲಾಯಿತು. ದೀಪಿಕಾ ಈ ಪ್ರಶ್ನೆಗೆ ಬಹಳ ಬುದ್ಧಿವಂತಿಕೆಯಿಂದ ಉತ್ತರಿಸಿದರು. ಅವರು ಯಾವುದೇ ನಟನ ಹೆಸರನ್ನು ಹೇಳಲಿಲ್ಲ. ಆದರೆ ಇಬ್ಬರೂ ಉತ್ತಮರು ಎಂದು ಅವರು ಹೇಳಿದ್ದರು. 'ನಿನ್ನ ತಾಯಿಯನ್ನು ಇಷ್ಟಪಡುತ್ತೀಯಾ ಅಥವಾ ನಿನ್ನ ತಂದೆಯನ್ನು ಇಷ್ಟಪಡುತ್ತೀಯಾ ಎಂದು ಹೇಳುತ್ತಿರುವಂತೆ ಇದೆ' ಎಂದು ನಟಿ ಹೇಳಿದ್ದರು. ದೀಪಿಕಾಳ ಈ ಉತ್ತರದ ನಂತರ, ಪ್ರೇಕ್ಷಕರಿಂದ ಒಬ್ಬರು ತಾಯಿ ಯಾರು ಎಂದು ಕೇಳಿದರು.

ಇಬ್ಬರೂ ಉತ್ತಮ ನಟರು

ಐಪಿಎಲ್ ಫೈನಲ್ ದಿನದಂದೇ ಇಂಗ್ಲೆಂಡ್‌ಗೆ ಹಾರಲಿದೆ ಟೀಂ ಇಂಡಿಯಾ

2025 ರ ಐಪಿಎಲ್ ಪ್ರಯಾಣ ಇದೀಗ ಪ್ಲೇಆಫ್ ಕಡೆಗೆ ಸಾಗುತ್ತಿದೆ. ಅಗ್ರ-4 ಸ್ಥಾನ ತಲುಪಲು ಎಲ್ಲಾ ತಂಡಗಳ ನಡುವೆ ಪೈಪೋಟಿ ತೀವ್ರಗೊಂಡಿದೆ. ಇಲ್ಲಿಯವರೆಗೆ 54 ಪಂದ್ಯಗಳನ್ನು ಆಡಲಾಗಿದೆಯಾದರೂ ಇದುವರೆಗೆ ಯಾವುದೇ ತಂಡಕ್ಕೂ ಪ್ಲೇಆಫ್‌ನಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಮಧ್ಯೆ, ಭಾರತ ತಂಡಕ್ಕೆ ಸಂಬಂಧಿಸಿದ ಒಂದು ದೊಡ್ಡ ಸುದ್ದಿ ಬೆಳಕಿಗೆ ಬಂದಿದೆ. ವಾಸ್ತವವಾಗಿ, ಭಾರತ ಎ ಮತ್ತು ಹಿರಿಯ ಪುರುಷರ ತಂಡವು ಐಪಿಎಲ್ 2025 ರ ನಂತರ ಇಂಗ್ಲೆಂಡ್ ಪ್ರವಾಸ ಮಾಡಬೇಕಾಗಿದೆ. ಈ ಪ್ರವಾಸದಲ್ಲಿ, ಭಾರತ ಎ ತಂಡವು ಇಂಗ್ಲೆಂಡ್ ಲಯನ್ಸ್ ವಿರುದ್ಧ ಮೂರು ನಾಲ್ಕು ದಿನಗಳ ಪಂದ್ಯಗಳನ್ನು ಆಡಲಿದೆ. ಅದೇ ಸಮಯದಲ್ಲಿ, ಟೀಮ್ ಇಂಡಿಯಾ ಇಂಗ್ಲೆಂಡ್ ವಿರುದ್ಧ 5 ಟೆಸ್ಟ್ ಪಂದ್ಯಗಳನ್ನು ಆಡಬೇಕಾಗಿದೆ.

ವಾಸ್ತವವಾಗಿ, ಐಪಿಎಲ್ 2025 ಮೇ 25 ರಂದು ಕೊನೆಗೊಳ್ಳುತ್ತದೆ. ಲೀಗ್‌ನ ಅಂತಿಮ ಪಂದ್ಯ ಕೋಲ್ಕತ್ತಾದಲ್ಲಿ ನಡೆಯಲಿದೆ. ಆದರೆ ಅದೇ ದಿನ ಭಾರತ ಎ ತಂಡ ಇಂಗ್ಲೆಂಡ್‌ಗೆ ಹೊರಡಬಹುದು. ಟೈಮ್ಸ್ ಆಫ್ ಇಂಡಿಯಾ ವರದಿಯ ಪ್ರಕಾರ, ಭಾರತ ತಂಡ ಮೇ 25 ರಂದು ಇಂಗ್ಲೆಂಡ್‌ಗೆ ತೆರಳುವ ಸಾಧ್ಯತೆಯಿದೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಕೂಡ ಇದಕ್ಕಾಗಿ ಸಿದ್ಧತೆಗಳನ್ನು ಪ್ರಾರಂಭಿಸಿದೆ. ಆದರೆ, ತಂಡವನ್ನು ಇನ್ನೂ ಆಯ್ಕೆ ಮಾಡಿಲ್ಲ. ಇದರ ಹೊರತಾಗಿಯೂ, ಬಿಸಿಸಿಐ ಅನೇಕ ಆಟಗಾರರನ್ನು ಸಂಪರ್ಕಿಸಿದ್ದು, ಅವರ ಪಾಸ್‌ಪೋರ್ಟ್ ಮತ್ತು ಜೆರ್ಸಿ ಸೈಜ್‌ಗಳನ್ನು ಆಯ್ಕೆ ಮಾಡಲಿದೆ. ಭಾರತ ಎ ವಿರುದ್ಧ ಇಂಗ್ಲೆಂಡ್ ಲಯನ್ಸ್ ಸರಣಿ ಮೇ 30 ರಿಂದ ಆರಂಭವಾಗಲಿದೆ. ಸರಣಿಯ ಮೊದಲ ಪಂದ್ಯ ಕ್ವಾಂಟರ್ಬರಿಯಲ್ಲಿ ನಡೆಯಲಿದೆ. ಅದೇ ಸಮಯದಲ್ಲಿ, ಹಿರಿಯರ ತಂಡವು ಜೂನ್ 20 ರಿಂದ ಇಂಗ್ಲೆಂಡ್ ವಿರುದ್ಧ 5 ಪಂದ್ಯಗಳ ಟೆಸ್ಟ್ ಸರಣಿಯನ್ನು ಆಡಲಿದೆ. ಇದು 2025-27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಮೊದಲ ಸರಣಿಯೂ ಆಗಿರುತ್ತದೆ.

ಇಂಗ್ಲೆಂಡ್ ಪ್ರವಾಸಕ್ಕೆ ಬಿಸಿಸಿಐ ಯೋಜನೆ

ಟೀಂ ಇಂಡಿಯಾ ಪ್ರಯಾಣ ಯಾವಾಗ

ಭಾರತದ ಹಿರಿಯರ ತಂಡ ಜೂನ್ ಮೊದಲ ತಿಂಗಳಲ್ಲಿ ಇಂಗ್ಲೆಂಡ್‌ಗೆ ತೆರಳಬಹುದು. 5 ಪಂದ್ಯಗಳ ಟೆಸ್ಟ್ ಸರಣಿಗೂ ಮುನ್ನ ಭಾರತೀಯ ಆಟಗಾರರು ಅಂತರ್-ತಂಡದ ಪಂದ್ಯಗಳನ್ನು ಆಡಲಿದ್ದಾರೆ. ಇದಲ್ಲದೆ ತಂಡದ ಕೆಲವು ಹಿರಿಯ ಆಟಗಾರರು ಭಾರತ ಎ ತಂಡದೊಂದಿಗೆ ಇಂಗ್ಲೆಂಡ್ ಲಯನ್ಸ್ ವಿರುದ್ಧ ಪಂದ್ಯಗಳನ್ನು ಆಡಲಿದ್ದಾರೆ. ಆದರೆ ಅದು ನಡೆಯುತ್ತಿರುವ ಐಪಿಎಲ್‌ನಲ್ಲಿ ಆಯಾ ತಂಡಗಳು ಟೂರ್ನಿಯಲ್ಲಿ ಯಾವ ಹಂತದವರೆಗೆ ಅರ್ಹತೆ ಪಡೆಯುತ್ತವೆ ಎಂಬುದರ ಜೊತೆಗೆ ವೈದ್ಯಕೀಯ ತಂಡದಿಂದ ಅಗತ್ಯವಾದ ಅನುಮತಿಯನ್ನು ಪಡೆಯುವುದರ ಮೇಲೆ ಅವಲಂಬಿತವಾಗಿರುತ್ತದೆ.

ಕನ್ನಡಿಗನ ಕನಸು ಭಗ್ನ ಐಪಿಎಲ್‌ನಿಂದ ಔಟ್

ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಬದಲಿ ಆಟಗಾರನಾಗಿ ಎಂಟ್ರಿ ಕೊಟ್ಟಿದ್ದ ಕರ್ನಾಟಕದ ಸ್ಫೋಟಕ ಎಡಗೈ ದಾಂಡಿಗ ಸ್ಮರಣ್ ರವಿಚಂದ್ರನ್ ಇದೀಗ ಐಪಿಎಲ್‌ನಿಂದ ಹೊರಬಿದ್ದಿದ್ದಾರೆ. ಎಸ್‌ಆರ್‌ಹೆಚ್ ತಂಡಕ್ಕೆ ಆಯ್ಕೆಯಾಗಿದ್ದ ಸ್ಮರಣ್ ಅವರು ಗಾಯಗೊಂಡಿದ್ದು, ಹೀಗಾಗಿ ಅವರನ್ನು ತಂಡದಿಂದ ಕೈ ಬಿಡಲಾಗಿದೆ. ಇದಕ್ಕೂ ಮುನ್ನ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿದ್ದ ಆಸ್ಟ್ರೇಲಿಯಾ ಸ್ಪಿನ್ನರ್ ಆಡಂ ಝಂಪಾ ಗಾಯಗೊಂಡಿದ್ದರು. ಹೀಗಾಗಿ ಅವರ ಬದಲಿಗೆ ಕರ್ನಾಟಕದ ಎಡಗೈ ದಾಂಡಿಗ ಸ್ಮರಣ್ ರವಿಚಂದ್ರನ್ ಅವರನ್ನು ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿ ಆಯ್ಕೆ ಮಾಡಿಕೊಂಡಿತ್ತು.

ಸ್ಮರಣ್‌ಗೆ ಗಾಯ

ಅದರಂತೆ ಏಪ್ರಿಲ್ 14 ರಂದು ಸನ್‌ರೈಸರ್ಸ್ ಹೈದರಾಬಾದ್ ಬಳಗವನ್ನು ಸೇರಿಕೊಂಡಿದ್ದ ಸ್ಮರಣ್ ರವಿಚಂದ್ರನ್ ಅಭ್ಯಾಸ ವೇಳೆ ಗಾಯಗೊಂಡಿದ್ದಾರೆ. ಹೀಗಾಗಿ ಅವರನ್ನು ಎಸ್‌ಆರ್‌ಹೆಚ್ ತಂಡದಿಂದ ಕೈ ಬಿಡಲಾಗಿದ್ದು, ಅವರ ಬದಲಿಗೆ ವಿದರ್ಭದ ಆಲ್‌ರೌಂಡರ್ ಹರ್ಷ್ ದುಬೆಯನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ ಎಂದು ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿ ತಿಳಿಸಿದೆ. ಇದರೊಂದಿಗೆ ಚೊಚ್ಚಲ ಐಪಿಎಲ್ ಪಂದ್ಯವಾಡುವ ಸ್ಮರಣ್ ರವಿಚಂದ್ರನ್ ಅವರ ಕನಸು ಕೂಡ ಕಮರಿದೆ. 21 ವರ್ಷದ ಸ್ಮರಣ್ ರವಿಚಂದ್ರನ್ ಕಳೆದ ವರ್ಷ ನಡೆದ ಮಹಾರಾಜ ಟಿ20 ಲೀಗ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ್ದರು. ಗುಲ್ಬರ್ಗ ಮಿಸ್ಟಿಕ್ಸ್ ಪರ ಕಣಕ್ಕಿಳಿದಿದ್ದ ಸ್ಮರಣ್ ಕೇವಲ 9 ಇನ್ನಿಂಗ್ಸ್‌ಗಳಿಂದ 43.14 ರ ಸರಾಸರಿಯಲ್ಲಿ 302 ರನ್ ಬಾರಿಸಿದ್ದರು. ಅದು ಸಹ 145.19 ರ ಅದ್ಭುತ ಸ್ಟ್ರೈಕ್ ರೇಟ್‌ನಲ್ಲಿ ಎಂಬುದು ವಿಶೇಷ. ಅಲ್ಲದೆ 2024ರ ಮಹಾರಾಜ ಟಿ20 ಟೂರ್ನಿಯಲ್ಲಿ ಒಂದು ಶತಕ ಹಾಗೂ 2 ಅರ್ಧಶತಕಗಳನ್ನು ಸಹ ಬಾರಿಸಿ ಅಬ್ಬರಿಸಿದ್ದರು. ಈ ಭರ್ಜರಿ ಪ್ರದರ್ಶನದ ಫಲವಾಗಿ ಸ್ಮರಣ್ ರವಿಚಂದ್ರನ್ ಅವರನ್ನು ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿ ಬದಲಿ ಆಟಗಾರನಾಗಿ ತಂಡಕ್ಕೆ ಆಯ್ಕೆ ಮಾಡಿಕೊಂಡಿತ್ತು.



ಆರ್‌ಸಿಬಿ ಫ್ಯಾನ್ಸ್‌ಗೆ ಗುಡ್‌ನ್ಯೂಸ್ ಹೇಳಿದ ಹರ್ಭಜನ್ ಸಿಂಗ್..

ಫೈನಲ್ ಪ್ರವೇಶ ಮಾಡೋ ತಂಡ ಯಾವುದು..

ಐಪಿಎಲ್‌ನಲ್ಲಿ ಈ ಸಲ ಫೈನಲ್ ಪ್ರವೇಶ ಮಾಡಲಿರುವ ಎರಡು ತಂಡಗಳು ಯಾವುದು ಅಂತಾ ಟೀಂ ಇಂಡಿಯಾದ ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್ ಭವಿಷ್ಯ ನುಡಿದಿದ್ದಾರೆ. ಮುಂಬೈ ಇಂಡಿಯನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವೆ ಫೈನಲ್ ನಡೆಯಬಹುದು ಎಂದು ಭಜ್ಜಿ ಊಹಿಸಿದ್ದಾರೆ. ಶನಿವಾರ ಚೆನ್ನೈ ಮತ್ತು ಬೆಂಗಳೂರು ಮುಖಾಮುಖಿ ಆಗಿದ್ದವು. ಈ ಪಂದ್ಯದ ವೀಕ್ಷಕ ವಿವರಣೆ ವೇಳೆ ಹರ್ಭಜನ್ ಸಿಂಗ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬಾರಿ ಎರಡೂ ತಂಡಗಳು ಉತ್ತಮ ಫಾರ್ಮ್‌ನಲ್ಲಿವೆ. ಆರ್‌ಸಿಬಿ 16